ಪತ್ತಿನ ಸಹಕಾರ ಚಳವಳಿ, ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಮೀಸಲಾದ ಕನ್ನಡ ಮಾಸಪತ್ರಿಕೆ

ಕರ್ನಾಟಕ ರಾಜ್ಯ
ಸಹಕಾರ ಪತ್ತಿನ ಸಂಘಗಳ
ಮಹಾಮಂಡಳದ ಪ್ರಕಟಣೆ

# ಸಹಕಾರ

ಮಾಸ ಪತ್ರಿಕೆ

ಸಂಪುಟ : 7 । ಸಂಚಿಕೆ : 11 । ನವೆಂಬರ್-2025 । ಪುಟಗಳು : 20 । ಬೆಲೆ : 25/-



## ಕನ್ನಡ ರಾಜ್ಯೋತ್ಸವದ ಶುಭಾಶಯಗಳು



**ಎಸ್. ಚಂದ್ರಶೇಖರ್**
ಅಧ್ಯಕ್ಷರು



**ಧರೇಪ್ಪ ಎಂ. ಆಲಗೂರ**
ಉಪಾಧ್ಯಕ್ಷರು

ಆಡಳಿತ ಮಂಡಳಿ ನಿರ್ದೇಶಕರು, ಕರ್ನಾಟಕ ರಾಜ್ಯ
ಸಹಕಾರ ಪತ್ತಿನ ಸಂಘಗಳ ಮಹಾಮಂಡಳ, ಬೆಂಗಳೂರು.

## ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅಧ್ಯಕ್ಷತೆಯಲ್ಲಿ
## 72ನೇ ಅಖಿಲ ಭಾರತ ಸಹಕಾರ ಸಪ್ತಾಹದ ಪೂರ್ವಭಾವಿ ಸಭೆ



# 72ನೇ ಅಖಿಲ ಭಾರತ ಸಹಕಾರ ಸಪ್ತಾಹ

ದಿನಾಂಕ: 14.11.2025 ರಿಂದ 20.11.2025

## 7 ದಿನಗಳ ಆಚರಣೆಯ ಶೀರ್ಷಿಕೆಗಳು

**ಧ್ಯೇಯ: ಆತ್ಮನಿರ್ಭರ ಭಾರತ ಸಾಧನೆಗೆ ವಾಹಕಗಳಾಗಿ ಸಹಕಾರ ಸಂಸ್ಥೆಗಳು**

**Theme: Cooperatives as Vehicles for Atmanirbhar Bharat**

| ದಿನಾಂಕ | ದಿನದ ವಿಷಯಗಳು |
|---|---|
| 14.11.2025<br>ಶುಕ್ರವಾರ<br>ಬೆಂಗಳೂರು | ಕಾರ್ಯದಕ್ಷತೆ, ಉತ್ತರದಾಯಿತ್ವ ಮತ್ತು ಪಾರದರ್ಶಕತೆಯನ್ನು ಹೆಚ್ಚಿಸಲು ಡಿಜಿಟಲೀಕರಣವನ್ನು ಪ್ರೋತ್ಸಾಹಿಸುವುದು. |
| | Promoting digitalisation to enhance operational efficiency,<br>accountability and transparency. |
| 15.11.2025<br>ಶನಿವಾರ<br>ರಾಯಚೂರು | ತ್ರಿಭುವನ್ ಸಹಕಾರ ವಿಶ್ವವಿದ್ಯಾಲಯ: ಸಂಶೋಧನೆ ಮತ್ತು ತರಬೇತಿಯಿಂದ ಸಹಕಾರ ಶಿಕ್ಷಣದಲ್ಲಿ ಪರಿವರ್ತನೆ |
| | Tribhuvan Sahakar University Research,<br>and Training Transforming Cooperative Education. |
| 16.11.2025<br>ಭಾನುವಾರ<br>ಮಂಗಳೂರು | ಸಹಕಾರ ಸಂಸ್ಥೆಗಳ ಮೂಲಕ ಗ್ರಾಮೀಣ ಅಭಿವೃದ್ಧಿಯ ಬಲವರ್ಧನೆ |
| | Strengthening rural development through cooperatives. |
| 17.11.2025<br>ಸೋಮವಾರ<br>ಹೊಸಪೇಟೆ | ರಾಷ್ಟ್ರೀಯ ಸಹಕಾರ ನೀತಿಯ ಪರಿಸರ ವ್ಯವಸ್ಥೆ ಭಾರತದ ಸಹಕಾರ ಸಂಸ್ಥೆಗಳಿಗೆ ರಚನಾತ್ಮಕ ಮಾರ್ಗಸೂಚಿ |
| | National Cooperative Policy ecosystem, structured roadmap for India's cooperatives. |
| 18.11.2025<br>ಮಂಗಳವಾರ<br>ಹಾವೇರಿ | ಸಹಕಾರಿ ಉದ್ಯಮಶೀಲತೆಯಿಂದ ಯುವಜನ, ಮಹಿಳಾ ಮತ್ತು ಅಬಲ ವರ್ಗದ ಸಬಲೀಕರಣ<br>(ಕರಕುಶಲ, ಕೈಮಗ್ಗ, ಕಾರ್ಮಿಕ, ಮೀನುಗಾರಿಕೆ ಇತ್ಯಾದಿ) |
| | Empowering Youth, Women and weaker sectors<br>(Handicrafts, handloom, labour, fisheries etc.) through cooperative entrepreneurship. |
| 19.11.2025<br>ಬುಧವಾರ<br>ಕೊಪ್ಪಳ | ಪ್ರವಾಸೋದ್ಯಮ, ಆರೋಗ್ಯ, ಹಸಿರು ಇಂಧನ, ಪ್ಲಾಟ್‌ಫಾರಂ ಸಹಕಾರಿ ಸಂಸ್ಥೆಗಳು, ಕಿಚನ್ ಸಹಕಾರ ಸಂಘಗಳು<br>ಮತ್ತಿತರ ಉದಯೋನ್ಮುಖ ಸಹಕಾರ ಸಂಘಗಳನ್ನು ಅನುಕೂಲಕರ ಪ್ರದೇಶಗಳಿಗೆ ವಿಸ್ತರಣೆ |
| | Expanding cooperatives in emerging areas such as Tourism, Health, Green Energy,<br>Platform Coops, Kitchen Coops and any other Conceivable area. |
| 20.11.2025<br>ಗುರುವಾರ<br>ಚಾಮರಾಜನಗರ | ಜಾಗತಿಕ ಸ್ಪರ್ಧಾತ್ಮಕತೆಗಾಗಿ ನವನಾವೀನ್ಯತೆಯ ಸಹಕಾರಿ ವ್ಯವಹಾರದ ಮಾದರಿಗಳು |
| | Innovative Cooperative Business models for global competitiveness |

# ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು

## ಆಡಳಿತ ಮಂಡಳಿ



ಶಿದ್ದನಗೌಡ ಸಂಣರಾಮನಗೌಡ ಪಾಟೀಲ
ಸಹಕಾರಿ ಪಿತಾಮಹ



ಶ್ರೀ ಬಿ.ಎಲ್. ಲಕ್ಕೇಗೌಡರು
ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ಸಂಸ್ಥಾಪಕ ಅಧ್ಯಕ್ಷರು



ಎಸ್. ಚಂದ್ರಶೇಖರ್
ಅಧ್ಯಕ್ಷರು



ಧರೇಪ್ಪ ಎಂ. ಆಲಗೂರ
ಉಪಾಧ್ಯಕ್ಷರು



ಸಿ.ಎಂ. ಮಾರೇಗೌಡ
ನಿರ್ದೇಶಕರು



ಡಾ. ಬಿ.ಡಿ. ಭೂಕಾಂತ
ನಿರ್ದೇಶಕರು



ಡಾ. ಸಂಜಯ ಪಂ. ಹೊಸಮಠ
ನಿರ್ದೇಶಕರು



ಕೆ.ಕೆ. ಮಹೇಂದ್ರ ಪ್ರಸಾದ್‌ಗೌಡ
ನಿರ್ದೇಶಕರು



ಎಂ.ಜೆ. ನರೇಂದ್ರಕುಮಾರ
ನಿರ್ದೇಶಕರು



ಕೆ. ಕೃಷ್ಣಮೂರ್ತಿ
ನಿರ್ದೇಶಕರು



ಜಿ. ಮಲ್ಲಿಕಾರ್ಜುನಯ್ಯ
ನಿರ್ದೇಶಕರು



ತಮ್ಮಣ್ಣ ಬಿ. ಕೆಂಚರಡ್ಡಿ
ನಿರ್ದೇಶಕರು



ಹೊನ್ನಯ್ಯ ವಿ. ಹಿರೇಮಠ
ನಿರ್ದೇಶಕರು



ಉಮೇಶ ಶಿ. ಬಾಳಿ
ನಿರ್ದೇಶಕರು



ರವೀಂದ್ರ ಪ್ರಲ್ಹಾದ ಕಲಬುರ್ಗಿ
ನಿರ್ದೇಶಕರು



ಡಾ. ನಾಗೇಂದ್ರ ಡಿ.ಎಲ್.
ನಿರ್ದೇಶಕರು



ವೈ. ಶ್ರೀನಿವಾಸಗೌಡ
ನಿರ್ದೇಶಕರು



ಕೆ. ಜಗದೀಶ ಕಂದಿಕೆರೆ
ನಿರ್ದೇಶಕರು



ರಾಜೇಶ್ ಟಿ.
ನಿರ್ದೇಶಕರು



ಶಿವಕುಮಾರ ಬಸವರಾಜು ಬಾದವಾಡಗಿ
ನಿರ್ದೇಶಕರು



ಶಿವಾನಂದ ಬಸಪ್ಪ ನ್ಯಾಮಗೌಡ
ನಿರ್ದೇಶಕರು



ಹೆಚ್. ಅಶೋಕ್
ನಿರ್ದೇಶಕರು




ಚಂದ್ರಶೇಖರ್ ಕೋಲ್ಹಾರು
ನಿರ್ದೇಶಕರು



ಪ್ರಜ್ವಲ್ ಕೆ.ಎನ್.
ಮುಖ್ಯಕಾರ್ಯನಿರ್ವಹಣಾಧಿಕಾರಿ


SAHAKARA VARTHA PATHRIKE KANNADA MONTHLY
RNI-Reg No.KARKAN/2018/75796
Post Reg No.KA-BGW/1816/2025-27
Posting Date : 1 and 5 Every Month
Posted at : P/C RMS Bhavan, Bangalore PSO,
Blore-26 Published On : 31st of Previous Month
License to post without prepayment
PMG BG/WPP-405/2025-27




ಇಂದ : ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿಯಮಿತ
ಬೆಂಗಳೂರು ನಂ. 126 1ನೇ ಮುಖ್ಯರಸ್ತೆ, 2ನೇ ಅಡ್ಡರಸ್ತೆ, ಜೆಬಿ ಕಾವಲ್,
ರಾಜೀವ್‌ಗಾಂಧಿ ನಗರ, ನಂದಿನಿ ಲೇಔಟ್, ಬೆಂಗಳೂರು–560096

**Printed at : Biligiri Printers**
**Chamrajpet, Bengaluru - 18**

## ಸಂಪಾದಕೀಯ



**ಎಸ್. ಚಂದ್ರಶೇಖರ್**
**ಅಧ್ಯಕ್ಷರು**

ದೇಶದ ಸಹಕಾರ ಕ್ಷೇತ್ರದಲ್ಲಿ ಸಾಕಷ್ಟು ಸುಧಾರಣೆಗಳು ಆಗಬೇಕಾಗಿದೆ. ಕಾಲಕಾಲಕ್ಕೆ ನಮ್ಮಲ್ಲಿ ಬದಲಾವಣೆಗಳಾಗಬೇಕು. ತಂತ್ರಜ್ಞಾನ, ಹೊಸತನವನ್ನು ನಾವೆಲ್ಲರೂ ಅಳವಡಿಸಿಕೊಳ್ಳಬೇಕು. ಹೊಸ ವಲಯಗಳನ್ನು ಸೃಷ್ಟಿಸಿ ಸೇವೆಗಳನ್ನು ಒದಗಿಸಬೇಕು. ಶಿಕ್ಷಣ ತರಬೇತಿಯಲ್ಲಿ ಹಲವು ಸುಧಾರಣೆಗಳನ್ನು ತಂದು ಸಹಕಾರ ಕ್ಷೇತ್ರದಲ್ಲಿ ತೊಡಗಿಸಿಕೊಂಡಿರುವವರಲ್ಲಿ ವಿಷಯಗಳ ಮನನವಾಗುವಂತೆ ಮಾಡಬೇಕಾದದ್ದು ನಮ್ಮೆಲ್ಲರ ಕರ್ತವ್ಯವೂ ಹೌದು.

# 72ನೇ ಅಖಿಲ ಭಾರತ ಸಹಕಾರ ಸಪ್ತಾಹ ಯಶಸ್ವಿ ಆಚರಣೆಯಾಗಲಿ

ರಾಷ್ಟ್ರೀಯ ಸಹಕಾರ ಯೂನಿಯನ್, ನವದೆಹಲಿ ಇದರ ಮಾರ್ಗದರ್ಶನದಲ್ಲಿ ನವಂಬರ್ 14 ರಿಂದ 20 ರವರೆಗೆ ಅಖಿಲ ಭಾರತ ಸಹಕಾರ ಸಪ್ತಾಹವನ್ನು ರಾಜ್ಯದ ಎಲ್ಲಾ ರೀತಿಯ ಸಹಕಾರ ಸಂಸ್ಥೆಗಳ ಸಹಯೋಗದಲ್ಲಿ ಆಚರಿಸಲಾಗುತ್ತಿದೆ.

ಈ ಬಾರಿಯ ಸಹಕಾರ ಸಪ್ತಾಹದ ಧ್ಯೇಯ "ಆತ್ಮ ನಿರ್ಭರ ಭಾರತ ಸಾಧನೆಗೆ ವಾಹಕಗಳಾಗಿ ಸಹಕಾರ ಸಂಸ್ಥೆಗಳು" ಎಂಬುದಾಗಿದೆ. ಜೊತೆಗೆ ಏಳು ದಿನಗಳ ಕಾಲ ಏಳು ವಿಷಯಗಳ ಬಗ್ಗೆ ಚಿಂತನ ಮಂಥನ ನಡೆಯಲಿದೆ.

ಸಹಕಾರ ಸಂಸ್ಥೆಗಳ ಎಲ್ಲಾ ಪ್ರತಿನಿಧಿಗಳು, ಸಿಬ್ಬಂದಿ ವರ್ಗದವರು ಸಹಕಾರ ಸಪ್ತಾಹದಲ್ಲಿ ಬದ್ಧತೆಯಿಂದ ಪಾಲ್ಗೊಂಡು ಕಾರ್ಯಕ್ರಮವನ್ನು ಪರಿಣಾಮಕಾರಿಯಾಗಿ ಆಚರಿಸಲು ಪತ್ತಿನ ಮಹಾಮಂಡಳವು ಮನವಿ ಮಾಡುತ್ತದೆ.

ದೇಶದ ಸಹಕಾರ ಕ್ಷೇತ್ರದಲ್ಲಿ ಸಾಕಷ್ಟು ಸುಧಾರಣೆಗಳು ಆಗಬೇಕಾಗಿದೆ. ಕಾಲಕಾಲಕ್ಕೆ ನಮ್ಮಲ್ಲಿ ಬದಲಾವಣೆಗಳಾಗಬೇಕು. ತಂತ್ರಜ್ಞಾನ, ಹೊಸತನವನ್ನು ನಾವೆಲ್ಲರೂ ಅಳವಡಿಸಿಕೊಳ್ಳಬೇಕು. ಹೊಸ ವಲಯಗಳನ್ನು ಸೃಷ್ಟಿಸಿ ಸೇವೆಗಳನ್ನು ಒದಗಿಸಬೇಕು. ಶಿಕ್ಷಣ ತರಬೇತಿಯಲ್ಲಿ ಹಲವು ಸುಧಾರಣೆಗಳನ್ನು ತಂದು ಸಹಕಾರ ಕ್ಷೇತ್ರದಲ್ಲಿ ತೊಡಗಿಸಿಕೊಂಡಿರುವವರಲ್ಲಿ ವಿಷಯಗಳ ಮನನವಾಗುವಂತೆ ಮಾಡಬೇಕಾದದ್ದು ನಮ್ಮೆಲ್ಲರ ಕರ್ತವ್ಯವೂ ಹೌದು.

ಭಾರತದ ಜನಸಂಖ್ಯೆಗೆ ಹೋಲಿಕೆ ಮಾಡಿದಾಗ ದೇಶದ ಸಹಕಾರ ಸಂಸ್ಥೆಗಳಲ್ಲಿ ಅಂದಾಜು 32 ಕೋಟಿ ಜನರಿದ್ದಾರೆ. ಆದರೆ ಮಹಿಳೆಯರು, ಯುವಜನರು ಹೆಚ್ಚಿನ ಸಂಖ್ಯೆಯಲ್ಲಿ ಸದಸ್ಯತ್ವ ಪಡೆದು ಚಳವಳಿಯಲ್ಲಿ ಭಾಗವಹಿಸುವುದರ ಜೊತೆಗೆ, ಕ್ಷೇತ್ರದಲ್ಲಿ ಲಭ್ಯವಾಗುವ ಸೌಲಭ್ಯ ಸೇವೆಗಳನ್ನು ಪಡೆದಾಗ ಮಾತ್ರ ಸಹಕಾರ ಚಳುವಳಿ ಯಶಸ್ಸುಗಳಿಸಲು ಸಾಧ್ಯವಾಗುತ್ತದೆ. ಈ ನಿಟ್ಟಿನಲ್ಲಿ ನಾವೆಲ್ಲರೂ ಬದ್ದತೆಯಿಂದ ಶ್ರಮಿಸಬೇಕಾಗಿದೆ.

ತಮ್ಮೆಲ್ಲರಿಗೂ 72ನೇ ಅಖಿಲ ಭಾರತ ಸಹಕಾರ ಸಪ್ತಾಹದ ಜೊತೆಗೆ ನಮ್ಮೆಲ್ಲರ ನಾಡಹಬ್ಬ ಕನ್ನಡ ರಾಜ್ಯೋತ್ಸವದ ಶುಭಾಶಯಗಳು. ಕನ್ನಡ ರಾಜ್ಯೋತ್ಸವ ಮತ್ತು ಸಹಕಾರ ರತ್ನ ಪ್ರಶಸ್ತಿಗೆ ಆಯ್ಕೆಯಾಗಿರುವ ಎಲ್ಲರಿಗೂ ಕರ್ನಾಟಕ ರಾಜ್ಯ ಪತ್ತಿನ ಸಹಕಾರ ಮಹಾಮಂಡಳವು ಶುಭಾಶಯ ಅಭಿನಂದನೆಗಳನ್ನು ಸಲ್ಲಿಸುತ್ತದೆ.

ಪತ್ತಿನ ಸಹಕಾರ ಚಳವಳಿ, ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಮೀಸಲಾದ ಏಕಮಾತ್ರ ಕನ್ನಡ ಮಾಸಪತ್ರಿಕೆ

ಸಹಕಾರ

ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ಪ್ರಕಟಣೆ

ಸಂಪಾದಕ ಮಂಡಳಿ

ಅಧ್ಯಕ್ಷರು / ಪ್ರಧಾನ ಸಂಪಾದಕರು :

ಶ್ರೀ ಎಸ್. ಚಂದ್ರಶೇಖರ್

ಸಂಪಾದಕರು :

ಪ್ರಜ್ವಲ್ ಕೆ.ಎಸ್.

ಮುಖ್ಯಕಾರ್ಯನಿರ್ವಹಣಾಧಿಕಾರಿ


**ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು**

ನಂ. 126, 1ನೇ ಮುಖ್ಯರಸ್ತೆ, 2ನೇ ಅಡ್ಡರಸ್ತೆ ಜೆಬಿ ಕಾವಲ್, ರಾಜೀವ್‌ಗಾಂಧಿ ನಗರ, ನಂದಿನಿ ಲೇಔಟ್, ಬೆಂಗಳೂರು–560096

ದೂರವಾಣಿ ಸಂಖ್ಯೆ : 080–23564444 / 23464033 / 23464034


ಇ–ಮೇಲ್ : info@ksccsf.org, ksccsfltd@gmail.com, ವೆಬ್ : www.ksccsf.org

## ಮೈಸೂರಿನ ಜನತಾ ಬಜಾರ್ ನೂತನ ಅಧ್ಯಕ್ಷರಾದ ಯು.ಎಸ್. ರಮೇಶ್ ಅವರಿಗೆ ಅಭಿನಂದನೆ ಸಲ್ಲಿಕೆ



ಜನತಾ ಬಜಾರ್, ಮೈಸೂರು ಇದರ ಅಧ್ಯಕ್ಷರಾಗಿ ಆಯ್ಕೆಯಾದ ಶ್ರೀ ಯು.ಎಸ್.ರಮೇಶ್ ರವರನ್ನು ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ಅಧ್ಯಕ್ಷರಾದ ಶ್ರೀ ಎಸ್. ಚಂದ್ರಶೇಖರ್, ಉಪಾಧ್ಯಕ್ಷರಾದ ಶ್ರೀ ಧರೇಪ್ಪ ಮಹದೇವ ಆಲಗೂರ ಮತ್ತು ನಿರ್ದೇಶಕರುಗಳಾದ ಡಾ॥ ಸಂಜಯ ಪಿ ಹೊಸಮಠ, ಶ್ರೀ ರವೀಂದ್ರ ಪ್ರಲ್ಹಾದ ಕಲಬುರ್ಗಿ, ಶ್ರೀ ತಮ್ಮಣ್ಣ ಬಾಲಪ್ಪ ಕೆಂಚರಡ್ಡಿ, ಶ್ರೀ ಶಿವಾನಂದ ಬಸಪ್ಪ ನ್ಯಾಮಗೌಡ ರವರುಗಳು ಅಭಿನಂದಿಸಿ ಸನ್ಮಾನಿಸಿದರು ಹಾಗೂ ಜನತಾ ಬಜಾರ್‌ನ ನಿರ್ದೇಶಕರಾದ ಶ್ರೀ ಎನ್. ಮಂಜುನಾಥ್‌ರವರೂ ಅಭಿನಂದಿಸಿದರು.

## ಶ್ರೀ ಶೇಖರಗೌಡ ಮಾಲಿಪಾಟೀಲ ರವರಿಗೆ 70ನೇ ಕನ್ನಡ ರಾಜ್ಯೋತ್ಸವ ಪ್ರಶಸ್ತಿ



ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ಮಾಜಿ ನಿರ್ದೇಶಕರಾದ ಶ್ರೀ ಶೇಖರಗೌಡ ಮಾಲಿಪಾಟೀಲರವರಿಗೆ 70ನೇ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಲಭಿಸಿದ್ದು ಪತ್ತಿನ ಮಹಾಮಂಡಳದ ವತಿಯಿಂದ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಆಡಳಿತಮಂಡಳಿ ಸದಸ್ಯರುಗಳು ಅಭಿನಂದನೆ ಸಲ್ಲಿಸಿದ್ದಾರೆ.

ಸಹಕಾರ ವಾರ್ತಾ ಪತ್ರಿಕೆ ಚಂದಾದಾರರಾಗ ಬಯಸುವವರು ಚಂದಾ ಹಣವನ್ನು "ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು" ಇವರ ಹೆಸರಿಗೆ ಚೆಕ್ ಅಥವಾ ಡಿಡಿಯನ್ನು ಬರೆದು ಕಳುಹಿಸಬೇಕಾಗಿ ವಿನಂತಿ. - ಸಿ.ಇ.ಒ.
ಐದು ವರ್ಷಗಳ ಚಂದಾ: ರೂ : 1770/-

ಸೂಚನೆ :
ಈ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿನ ಅನಿಸಿಕೆ, ಅಭಿಪ್ರಾಯಗಳು ಆಯಾ ಬರಹಗಾರರದೇ ಆಗಿರುತ್ತದೆ ವಿನಃ ಪತ್ರಿಕೆ / ಮಹಾಮಂಡಳದ ವಿಚಾರಗಳಾಗಿರುವುದಿಲ್ಲ.
- ಸಂಪಾದಕರು,
ಸಹಕಾರ ವಾರ್ತಾ ಪತ್ರಿಕೆ.

## 72ನೇ ಅಖಿಲ ಭಾರತ ಸಹಕಾರ ಸಪ್ತಾಹದ ಪೂರ್ವಭಾವಿ ಸಭೆ

# ಅರ್ಥಪೂರ್ಣವಾಗಿ ಸಹಕಾರ ಸಪ್ತಾಹದ ಆಚರಣೆ ಆಗಲಿ : ಮುಖ್ಯಮಂತ್ರಿ ಸಿದ್ದರಾಮಯ್ಯ ಸಲಹೆ



**72ನೇ ಅಖಿಲ ಭಾರತ ಸಹಕಾರ ಸಪ್ತಾಹವನ್ನು ರಾಜ್ಯಮಟ್ಟದಲ್ಲಿ ನವೆಂಬರ್ 14 ರಿಂದ 20 ರವರೆಗೆ ರಾಜ್ಯಾದ್ಯಂತ ಆಚರಿಸಲಾಗುತ್ತಿದ್ದು, ನವೆಂಬರ್ 14 ರಂದು ಬೆಂಗಳೂರಿನಲ್ಲಿ ಮುಖ್ಯಮಂತ್ರಿಯವರು ಸಪ್ತಾಹ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಇದೇ ಸಂದರ್ಭದಲ್ಲಿ ರಾಜ್ಯದ ಸಹಕಾರ ಚಳವಳಿಯ ಬೆಳವಣಿಗೆಗೆ ಶ್ರಮಿಸಿರುವ ಸಹಕಾರಿಗಳಿಗೆ "ಸಹಕಾರ ರತ್ನ" ಪ್ರಶಸ್ತಿಯನ್ನು ಪ್ರದಾನ ಮಾಡಲಾಗುವುದು. ನವೆಂಬರ್ 15 ರಂದು ರಾಯಚೂರಿನಲ್ಲಿ, 16 ರಂದು ಮಂಗಳೂರಿನಲ್ಲಿ, 17 ರಂದು ಹೊಸಪೇಟೆಯಲ್ಲಿ, 18 ಹಾವೇರಿಯಲ್ಲಿ, 19 ಕೊಪ್ಪಳದಲ್ಲಿ ಹಾಗೂ ಸಮಾರೋಪ ಸಮಾರಂಭ ನವೆಂಬರ್ 20 ರಂದು ಚಾಮರಾಜನಗರದಲ್ಲಿ ಆಚರಣೆ ಮಾಡಲು ನಿರ್ಧರಿಸಲಾಗಿದೆ.**

**ಬೆಂಗಳೂರು** : 72ನೇ ಅಖಿಲ ಭಾರತ ಸಹಕಾರ ಸಪ್ತಾಹ ಅರ್ಥಪೂರ್ಣವಾಗಿ ಆಚರಣೆಯಾಗಲಿ. ಈ ಸಂದರ್ಭದಲ್ಲಿ ಸಹಕಾರ ಚಳವಳಿಯ ಬೆಳವಣಿಗೆಗೆ ಪೂರಕವಾದ ಚಿಂತನ-ಮಂಥನಗಳು ನಡೆಯಲಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಹಕಾರಿಗಳಿಗೆ ಹಾಗೂ ಅಧಿಕಾರಿಗಳಿಗೆ ತಿಳಿಸಿದರು.

72ನೇ ಅಖಿಲ ಭಾರತ ಸಹಕಾರ ಸಪ್ತಾಹದ ಅಂಗವಾಗಿ ದಿನಾಂಕ: 24.10.2025ರಂದು ವಿಧಾನಸೌಧದಲ್ಲಿ ಆಯೋಜಿಸಲಾಗಿದ್ದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಉದ್ಘಾಟನಾ ಸಮಾರಂಭದಲ್ಲಿ ರಾಜ್ಯದ ಸಹಕಾರ ಚಳವಳಿಯ ಬೆಳವಣಿಗೆಗೆ ಶ್ರಮಿಸುತ್ತಿರುವ ಸಹಕಾರಿಗಳನ್ನು ಮತ್ತು ಇಲಾಖೆಯ ನಿವೃತ್ತ ಅಧಿಕಾರಿಗಳನ್ನು ಗುರುತಿಸಿ "ಸಹಕಾರ ರತ್ನ" ಪ್ರಶಸ್ತಿ ನೀಡಿ ಗೌರವಿಸಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಿಳಿಸಿದರು.

ಕರ್ನಾಟಕದ ಸಹಕಾರ ವಲಯದಲ್ಲಿ ಪ್ರಾಥಮಿಕ ಕೃಷಿ ಪತ್ತು ಮತ್ತು ಕೃಷಿಯೇತರ ಪತ್ತಿನ ಸಹಕಾರ ಸಂಸ್ಥೆಗಳು ಹಾಗೂ ಹಾಲು ಉತ್ಪಾದಕರ ಸಹಕಾರ ಸಂಘಗಳು ಬೃಹದಾಕಾರವಾಗಿ ಬೆಳೆದಿವೆ. 16 ಹಾಲು ಒಕ್ಕೂಟಗಳಿಂದ ಪ್ರತಿದಿನ ಸುಮಾರು 1 ಕೋಟಿ ಲೀಟರ್ ಹಾಲು ಉತ್ಪಾದನೆಯಾಗುತ್ತಿದ್ದು, ರಾಜ್ಯ ಸರ್ಕಾರ ಹಾಲಿನ ಉತ್ಪಾದನೆಗೆ ಅಗತ್ಯ ಉತ್ತೇಜನ ನೀಡಿದೆ. ಅದೇ ರೀತಿ ಕೃಷಿ ಪತ್ತಿನ ಸಾಲದ ವ್ಯವಸ್ಥೆಯಲ್ಲಿ ಸುಧಾರಣೆಯಾಗಬೇಕು. ಇದಕ್ಕೆ ನಾವೆಲ್ಲರೂ ಪ್ರಯತ್ನಿಸುತ್ತೇವೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನುಡಿದರು.

ಪ್ರಸ್ತುತ ಸಹಕಾರ ಸಹಕಾರ ಇಲಾಖೆಯ ಜವಾಬ್ದಾರಿಯನ್ನು ಹೊತ್ತಿದ್ದೇನೆ. 72ನೇ ಅಖಿಲ ಭಾರತ ಸಹಕಾರ ಸಪ್ತಾಹವನ್ನು ಅರ್ಥಪೂರ್ಣವಾಗಿ ಆಚರಿಸಲು ಎಲ್ಲಾ ಸಹಕಾರಿಗಳು ಬದ್ಧತೆಯಿಂದ ಪಾಲ್ಗೊಳ್ಳಬೇಕು ಎಂದರು.

ಸಹಕಾರ ಚಳವಳಿಯ ಬೆಳವಣಿಗೆಗೆ ಪೂರಕವಾದ ಕೆಲಸಗಳನ್ನು ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳವು ನಿರ್ವಹಿಸಿಕೊಂಡು ಬರುತ್ತಿದೆ. ಇದರ ಹೊಣೆ ಹೊತ್ತಿರುವ ಶಾಸಕರು ಹಾಗೂ ಮಹಾಮಂಡಳದ ಅಧ್ಯಕ್ಷರಾದ ಜಿ.ಟಿ. ದೇವೇಗೌಡ ಅವರ ಮಾರ್ಗದರ್ಶನದಲ್ಲಿ 72ನೇ ಅಖಿಲ ಭಾರತ ಸಹಕಾರ ಸಪ್ತಾಹವನ್ನು ಅರ್ಥಪೂರ್ಣವಾಗಿ ಚಳವಳಿಯ ಸಾಧಕ ಬಾಧಕಗಳನ್ನು ಕುರಿತು ಚಿಂತನ ಮಂಥನ ನಡೆಸುವ ಮೂಲಕ ಆಚರಿಸೋಣ ಎಂದು ಸಹಕಾರಿಗಳಿಗೆ, ಇಲಾಖಾಧಿಕಾರಿಗಳಿಗೆ ಮಾರ್ಗದರ್ಶನ ಮಾಡಿದರು.

ಸಭೆಯಲ್ಲಿ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರಾದ ಹೆಚ್.ಕೆ. ಪಾಟೀಲ್ ರವರು ಮಾತನಾಡಿ, ರಾಜ್ಯದಲ್ಲಿ ಸಪ್ತಾಹದ ಆಚರಣೆ ಸಹಕಾರ ಚಳವಳಿಯ ಬಲವರ್ಧನೆಗೆ ಪೂರಕವಾಗಿ ನಡೆಯಬೇಕು. ಚಳವಳಿಯನ್ನು ಶಕ್ತಗೊಳಿಸುವಿಕೆ ಕುರಿತು ವಿಚಾರ ಸಂಕಿರಣಗಳು ಏರ್ಪಾಡಾಗಬೇಕು. ವಿವಿಧ ರೀತಿಯ ಸಹಕಾರ






ಸಂಸ್ಥೆಗಳ ಬಲವರ್ಧನೆಗೆ ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಉತ್ತೇಜನವನ್ನು ನೀಡಬೇಕು. ಪಟ್ಟಣ ಸಹಕಾರ ಬ್ಯಾಂಕುಗಳ ಆಡಳಿತ ವ್ಯವಸ್ಥೆ ಸುಧಾರಣೆಯಾಗಬೇಕು. ಸಹಕಾರ ಕ್ಷೇತ್ರದ ಅಬಲವರ್ಗಗಳಾದ ನೇಕಾರಿಕೆ, ಬಡಗಿ, ಕಮ್ಮಾರಿಕೆ, ಮೀನುಗಾರಿಕೆ ಈ ರೀತಿಯ ವೃತ್ತಿಮೂಲದ ಸಹಕಾರ ಸಂಸ್ಥೆಗಳಿಗೆ ಸರ್ಕಾರದ ಬೆಂಬಲ ಅಗತ್ಯವಾಗಿದೆ. ಆದ್ದರಿಂದ ಸಪ್ತಾಹದ ಈ ಸಂದರ್ಭದಲ್ಲಿ ಕ್ರಾಂತಿಕಾರಕ ಆಶಯಗಳು ಹೊರಬರುವ ಮೂಲಕ ಚಳವಳಿಯ ಬೆಳವಣಿಗೆಗೆ ಪೂರಕವಾದ ಸಪ್ತಾಹದ ಆಚರಣೆ ನಡೆಯಲಿ ಎಂದು ತಿಳಿಸಿದರು.

ಸಭೆಯಲ್ಲಿ ಪ್ರಾಸ್ತಾವಿಕವಾಗಿ ಮಾತನಾಡಿದ ಶಾಸಕರು ಹಾಗೂ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ಅಧ್ಯಕ್ಷರಾದ ಜಿ.ಟಿ. ದೇವೇಗೌಡ ಅವರು, ಸಹಕಾರ ಸಪ್ತಾಹದ ಕಾರ್ಯಕ್ರಮದ ಆಯೋಜನೆಗೆ ಸರ್ಕಾರದ ಬೆಂಬಲದ ಅಗತ್ಯವಿದೆ. ಈ ಕಾರಣದಿಂದ ಹಿಂದೆ ಮುಖ್ಯಮಂತ್ರಿಗಳಾಗಿದ್ದ ಹೆಚ್.ಡಿ. ದೇವೇಗೌಡ ಅವರನ್ನು ರಾಮನಗರದ ಅಂಕನಹಳ್ಳಿಯಲ್ಲಿ ಆಯೋಜನೆಯಾಗಿದ್ದ ಸಪ್ತಾಹದ ಕಾರ್ಯಕ್ರಮಕ್ಕೆ ಆಹ್ವಾನಿಸಿ, ಕಾರ್ಯಕ್ರಮವನ್ನು ಉದ್ಘಾಟಿಸಲಾಗಿತ್ತು. ಅಂದಿನಿಂದ ಸಹಕಾರ ಸಪ್ತಾಹಕ್ಕೆ ಸರ್ಕಾರದ ಸಂಪೂರ್ಣ ಬೆಂಬಲ ದೊರೆಯುತ್ತಿದೆ ಎಂದರು.

ಮುಂದುವರೆದು ಮಾತನಾಡಿದ ಅವರು, ಮುಖ್ಯಮಂತ್ರಿ ಎಸ್. ಎಂ. ಕೃಷ್ಣ ಅವರ ಅವಧಿಯಲ್ಲಿ ಸರ್ಕಾರದ ಮೂಲಕ ಹಾಲಿಗೆ ಪ್ರೋತ್ಸಾಹಧನ ಹಾಗೂ ಯಶಸ್ವಿನಿ ಯೋಜನೆ, ಸಹಕಾರ ರತ್ನ ಪ್ರಶಸ್ತಿ ವಿತರಣೆಯನ್ನು ಆರಂಭ ಮಾಡಲಾಯಿತು. ನಂತರ ಸಿದ್ದರಾಮಯ್ಯ ಅವರು ಹಣಕಾಸು ಸಚಿವರಾಗಿದ್ದಾಗಿನಿಂದಲೂ ಸಹ ಸಹಕಾರ ಕ್ಷೇತ್ರಕ್ಕೆ ಪೂರಕವಾಗಿ ಪ್ರೋತ್ಸಾಹ ನೀಡುತ್ತಾ ಬಂದಿದ್ದಾರೆ. ಹಾಲಿನ ಸಮರ್ಪಕ ಬಳಕೆಗಾಗಿ ಶಾಲಾ ಮಕ್ಕಳಿಗೆ ಹಾಲು ವಿತರಣಾ ಯೋಜನೆಯನ್ನು ಜಾರಿಗೆ ತಂದಿದ್ದಾರೆ. ಡೈರಿ ಕ್ಷೇತ್ರಕ್ಕೆ ಉತ್ತೇಜನ ನೀಡಲು ಒಕ್ಕೂಟಗಳ ಸ್ಥಾಪನೆಗೆ ನೆರವಾಗಿದ್ದಾರೆ. ಹೀಗಾಗಿ ಸಹಕಾರ ಚಳವಳಿ ಹಿರಿಯರ ಮಾರ್ಗದರ್ಶನ ಶ್ರಮದ ಪ್ರತಿಫಲದಿಂದ ಉತ್ತಮವಾಗಿ ಬೆಳೆದಿದೆ ಎಂದರು.

ನೆಹರೂರವರು ಪಂಚವಾರ್ಷಿಕ ಯೋಜನೆಗಳಲ್ಲಿ ಸಹಕಾರ ಕ್ಷೇತ್ರಕ್ಕೆ ನೀಡಿದ ಕೊಡುಗೆ ಸ್ಮರಿಸುವುದು ಸಹಕಾರ ಸಪ್ತಾಹದ ಆಚರಣೆಯ ಉದ್ದೇಶ ಹಾಗೂ ಈ ಸಂದರ್ಭದಲ್ಲಿ ಸಹಕಾರ ಚಳವಳಿಯ ಸಾಧನೆ, ವೈಫಲ್ಯ ಹಾಗೂ ಭವಿಷ್ಯದ ಯೋಜನೆಗಳ ಕುರಿತು ಚಿಂತನ ಮಂಥನ ನಡೆಸುವುದಾಗಿದ್ದು, 30 ಜಿಲ್ಲೆಗಳಲ್ಲಿ ಜಿಲ್ಲಾ ಮಟ್ಟದಲ್ಲಿ ಹಾಗೂ ರಾಜ್ಯಮಟ್ಟದಲ್ಲಿ 7 ದಿನಗಳ ಕಾಲ ಸಪ್ತಾಹವನ್ನು ಆಚರಣೆ ಮಾಡಲಿದ್ದು, ಸಪ್ತಾಹದ ದಿನಗಳಲ್ಲಿ ಸಹಕಾರ ಸಂಸ್ಥೆಗಳು ಸಹಕಾರಿ ಧ್ವಜವನ್ನು 7 ದಿನಗಳ ಕಾಲ ಹಾರಿಸುವ ಮೂಲಕ ಸಹಕಾರ ಚಳವಳಿಯ ಬಲಿಷ್ಠ ಬೆಳವಣಿಗೆಗೆ ಸಹಕರಿಸುವಂತೆ ತಿಳಿಸಿದರು.

ಶಾಸಕರು ಹಾಗೂ ಮಾಜಿ ಸಹಕಾರ ಸಚಿವರಾದ ಕೆ.ಎನ್. ರಾಜಣ್ಣ ಅವರು ಮಾತನಾಡುತ್ತಾ, ಮುಖ್ಯಮಂತ್ರಿಯವರು ಸಹಕಾರ ಇಲಾಖೆಯ ನೇತೃತ್ವ ವಹಿಸಿ, ಸಪ್ತಾಹದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿರುವುದು ಇತಿಹಾಸ. ಅವರು ಸದಾಕಾಲ ಸಹಕಾರ ಕ್ಷೇತ್ರದ ಬೆಳವಣಿಗೆಗೆ ಬೆಂಬಲ ನೀಡುತ್ತಾ ಬಂದಿದ್ದಾರೆ. ರಾಷ್ಟ್ರೀಯ ಸಹಕಾರಿ ಯೂನಿಯನ್ನಿನ ಮಾರ್ಗದರ್ಶನದಲ್ಲಿ 7 ದಿನಗಳ ಕಾಲ ವಿವಿಧ ವಿಷಯಗಳ ಕುರಿತು ಉಪನ್ಯಾಸ ಹಾಗೂ ಚಿಂತನ ಮಂಥನ





ಕಾರ್ಯಕ್ರಮಗಳ ಜೊತೆಗೆ ಸಹಕಾರ ಕ್ಷೇತ್ರದಲ್ಲಿ ಗಣನೀಯ ಸೇವೆ ಸಲ್ಲಿಸಿದ ಸಹಕಾರಿಗಳಿಗೆ "ಸಹಕಾರಿ ರತ್ನ" ಪ್ರಶಸ್ತಿಯನ್ನು ಸಹ ನೀಡಲಾಗುತ್ತದೆ. ಈ ಸಂದರ್ಭದಲ್ಲಿ ಮುಖ್ಯಮಂತ್ರಿಯವರು ಸಹಕಾರ ಕ್ಷೇತ್ರದ ಬೆಳವಣಿಗೆಗೆ ಪೂರಕ ಕ್ರಮಗಳನ್ನು ತೆಗೆದುಕೊಂಡು ಸಹಕಾರ ಕ್ಷೇತ್ರದ ನ್ಯೂನ್ಯತೆಗಳನ್ನು ಸರಿಪಡಿಸಿ, ಚಳವಳಿಯ ಬೆಳವಣಿಗೆಗೆ ಮಾರ್ಗದರ್ಶನ ನೀಡಬೇಕೆಂದು ತಿಳಿಸಿದರು.

ಸಭೆಯಲ್ಲಿ ಸಚಿವರುಗಳಾದ ಶಿವಾನಂದ ಪಾಟೀಲ್, ಎಸ್.ಎಸ್. ಮಲ್ಲಿಕಾರ್ಜುನ್, ಶಾಸಕರುಗಳಾದ ಎಸ್.ಟಿ. ಸೋಮಶೇಖರ್, ಕೆ. ಷಡಕ್ಷರಿ, ವಿ. ವೆಂಕಟೇಶ್, ವಿಧಾನ ಪರಿಷತ್ ಸದಸ್ಯರಾದ ಬಲ್ಕಿಷ್ ಭಾನು, ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳದ ಅಧ್ಯಕ್ಷರಾದ ಡಾ. ಎಂ.ಎನ್. ರಾಜೇಂದ್ರ ಕುಮಾರ್, ಕೆಓಎಫ್ ಅಧ್ಯಕ್ಷರಾದ ವೆಂಕಟರಾವ್ ನಾಡಗೌಡ, ಬಾಗಲಕೋಟೆ ಡಿಸಿಸಿ ಬ್ಯಾಂಕ್ ಅಧ್ಯಕ್ಷರಾದ ಅಜಯ್‌ಕುಮಾರ್ ಸರನಾಯಕ್, ಗ್ರಾಹಕ ಮಹಾಮಂಡಳದ ಅಧ್ಯಕ್ಷರಾದ ಜಿ.ಪಿ. ಪಾಟೀಲ್, ಸಂಯುಕ್ತ ಸಹಕಾರಿ ಅಧ್ಯಕ್ಷರಾದ ಎನ್. ನಂಜನಗೌಡ, ವಿವಿಧ ಮಹಾಮಂಡಳಗಳ ಅಧ್ಯಕ್ಷರುಗಳು ಹಾಗೂ ಮುಖ್ಯಕಾರ್ಯನಿರ್ವಹಣಾಧಿಕಾರಿಗಳು, ಡಿಸಿಸಿ ಬ್ಯಾಂಕುಗಳು ಅಧ್ಯಕ್ಷರುಗಳು ಹಾಗೂ ಮುಖ್ಯಕಾರ್ಯನಿರ್ವಹಣಾಧಿಕಾರಿಗಳು, ಹಾಲು ಒಕ್ಕೂಟಗಳ ಅಧ್ಯಕ್ಷರುಗಳು ಹಾಗೂ ಮುಖ್ಯಕಾರ್ಯನಿರ್ವಹಣಾಧಿಕಾರಿಗಳು, ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ನಿರ್ದೇಶಕರುಗಳು ಹಾಗೂ ಸಹಕಾರ ಇಲಾಖೆಯ ಕಾರ್ಯದರ್ಶಿ ಎಸ್.ಬಿ. ಶೆಟ್ಟಣ್ಣನವರ್, ಸಹಕಾರ ಸಂಘಗಳ ನಿಬಂಧಕರಾದ ಟಿ.ಎಚ್.ಎಂ. ಕುಮಾರ್, ಲೆಕ್ಕಪರಿಶೋಧನಾ ಇಲಾಖೆ ನಿರ್ದೇಶಕರಾದ ಎಂ.ಡಿ. ಮಲ್ಲೂರು, ಸಹಕಾರ ಇಲಾಖೆ ವಿಶೇಷ ಕರ್ತವ್ಯಾಧಿಕಾರಿ ಎ.ಸಿ. ದಿವಾಕರ್, ಸಹಕಾರ ಇಲಾಖೆಯ ಅಪರ ನಿಬಂಧಕರು ಮತ್ತು ಉಪನಿಬಂಧಕರುಗಳು ಹಾಗೂ ಮಹಾಮಂಡಳದ ಕಾರ್ಯದರ್ಶಿ ಅಶ್ವತ್ಥನಾರಾಯಣ ಮತ್ತು ಅಧಿಕಾರಿ ಸಿಬ್ಬಂದಿಗಳು ಉಪಸ್ಥಿತರಿದ್ದರು.

ಸಭೆಯ ಆರಂಭದಲ್ಲಿ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ವ್ಯವಸ್ಥಾಪಕ ನಿರ್ದೇಶಕರಾದ ಕೆ.ಎಸ್. ನವೀನ್‌ರವರು ಎಲ್ಲರನ್ನು ಸ್ವಾಗತಿಸಿ, ಮಹಾಮಂಡಳದ ಇತಿಹಾಸ ಮತ್ತು ಕಾರ್ಯಚಟುವಟಿಕೆಗಳ ಬಗ್ಗೆ ವಿವರಿಸಿದರು.





## ವಿಶ್ವ ಆಹಾರ ದಿನ ಆಚರಣೆ - 2025
## ಆಹಾರ ವ್ಯರ್ಥ ಮಾಡಬೇಡಿ, ಪ್ರತಿಯೊಬ್ಬರು ಪೌಷ್ಠಿಕ ಆಹಾರ ಸೇವಿಸಿ : ಮುಖ್ಯಮಂತ್ರಿ ಸಿದ್ದರಾಮಯ್ಯ

**ಬೆಂಗಳೂರು :** ಬೆಂಗಳೂರಿನಲ್ಲೆ ವರ್ಷಕ್ಕೆ 943 ಟನ್ ಅನ್ನ ವ್ಯರ್ಥವಾಗುತ್ತಿದೆ. ಇದು ಆಗಬಾರದು ಪ್ರತಿಯೊಬ್ಬ ನಾಗರೀಕನು ಪೌಷ್ಠಿಕಾಂಶಯುಕ್ತ ಆಹಾರ ಸೇವಿಸಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು. ಅವರು ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಯಿಂದ ವಿಧಾನ ಸೌಧದ ಬ್ಯಾಂಕ್ವೇಟ್ ಹಾಲಿನಲ್ಲಿ ಆಯೋಜಿಸಲಾಗಿದ್ದ ವಿಶ್ವ ಆಹಾರ ದಿನ ಉದ್ಘಾಟಿಸಿ ಮಾತನಾಡಿದರು.

ಹಸಿವಿನ ಸಂಕಟ, ಅನ್ನದ ಮೌಲ್ಯ ನನಗೆ ಗೊತ್ತು. ಅದಕ್ಕೇ ಅನ್ನಭಾಗ್ಯ ಯೋಜನೆ ಜಾರಿಗೆ ತರಲಾಯಿತು. ಐದು ಕೆಜಿ ಅಕ್ಕಿ ಜೊತೆಗೆ ಉಳಿದ ಐದು ಕೆಜಿ ಬೇಳೆ ಕಾಳು ಕೊಡಲು ತೀರ್ಮಾನಿಸಲಾಯಿತು. ಅನ್ನ ಬಿಸಾಡುವುದು ಅನ್ನಬ್ರಹ್ಮನಿಗೆ ಮಾಡುವ ಅವಮಾನ. ಕವಿ ಬೇಂದ್ರೆಯವರು ರೈತರನ್ನು ಅನ್ನಬ್ರಹ್ಮ ಎಂದು ಕರೆದಿದ್ದಾರೆ. ಆದ್ದರಿಂದ ಅನ್ನ ವ್ಯರ್ಥ ಮಾಡುವುದು, ಬಿಸಾಡುವುದು ಅನ್ನಬ್ರಹ್ಮನಿಗೆ ಮಾಡುವ ಅವಮಾನ ಎಂದರು. ನಾವು ಒಂದು ಕಾಲದಲ್ಲಿ ಅನ್ನಕ್ಕಾಗಿ ಅಮೆರಿಕದ ಮೇಲೆ ಅವಲಂಭಿತರಾಗಿದ್ದೆವು. ಈಗ ವಿದೇಶಗಳಿಗೆ ರಫ್ತು ಮಾಡುವ ಮಟ್ಟಕ್ಕೆ ಪ್ರಗತಿ ಸಾಧಿಸಿದ್ದೇವೆ. ಇದರ ಜೊತೆಗೆ ಊಟ ವ್ಯರ್ಥ ಮಾಡುವ ಪ್ರಮಾಣವೂ ಹೆಚ್ಚಾಗುತ್ತಿರುವುದು ಬೇಸರದ ಸಂಗತಿ ಎಂದರು. ಬೆಂಗಳೂರು ಒಂದರಲ್ಲೇ ಪ್ರತೀ ವರ್ಷ 943 ಟನ್ ಆಹಾರ ವ್ಯರ್ಥವಾಗುತ್ತಿದೆ. ಹೆಚ್ಚೂ ಕಡಿಮೆ 360 ಕೋಟಿ ಮೌಲ್ಯದ ಆಹಾರ ವೇಸ್ಟ್ ಮಾಡುತ್ತಿದ್ದೇವೆ ಎಂದು ಕೃಷಿ ವಿಶ್ವವಿದ್ಯಾಲಯದ ಅಧ್ಯಯನವನ್ನು ಉಲ್ಲೇಖಿಸಿದರು. ಆಹಾರ ಭದ್ರತಾ ಕಾಯ್ದೆಯನ್ನು ಜಾರಿಗೆ ತಂದಿದ್ದು ಪ್ರಧಾನಿ ಮನ ಮೋಹನ್ ಸಿಂಗ್. ಅವರನ್ನು ನಾವು ಸ್ಮರಿಸಬೇಕು. ಆಹಾರದ ಬಗ್ಗೆ ಜಾಗ್ರತೆ, ಸಣ್ಣ ರೈತರ ರಕ್ಷಣೆ ಮಾಡುವುದು ನಮ್ಮ, ನಿಮ್ಮ ಮತ್ತು ನಾಗರಿಕ ಸಮಾಜದ ಜವಾಬ್ದಾರಿ ಎಂದರು.



ಆಹಾರ ಸಚಿವರಾದ ಕೆ.ಹೆಚ್. ಮುನಿಯಪ್ಪ ಅವರು ಮಾತನಾಡಿ, ಆಹಾರವನ್ನು ತಿನ್ನುವ ಹಕ್ಕಿದೆ, ಬಿಸಾಡುವ ಹಕ್ಕಿಲ್ಲ. ಅಕ್ಟೋಬರ್-16 ಅನ್ನದ ಋಣ ತೀರಿಸುವ ಒಂದು ಸುವರ್ಣಾವಕಾಶ. ಪ್ರತಿ ವರ್ಷ ಅಕ್ಟೋಬರ್ 16 ರಂದು ವಿಶ್ವದಾದ್ಯಂತ "ವಿಶ್ವ ಆಹಾರ ದಿನ"ವನ್ನು ಅರ್ಥಪೂರ್ಣವಾಗಿ ಆಚರಿಸಲಾಗುತ್ತಿದೆ ಎಂದರು. ಹಸಿವಿನಿಂದ ಪ್ರತಿ ದಿನ ವಿಶ್ವದಲ್ಲಿ 19700 ಜನ ಸಾಯುತ್ತಿದ್ದಾರೆ. ಅಂದರೆ ಪ್ರತಿ 4 ಸೆಕೆಂಡಿಗೆ ಒಬ್ಬರು ಎಂದು ಎರಡು ವರ್ಷಗಳ ಹಿಂದೆ ನ್ಯೂಯಾರ್ಕ್‌ನ ವಿಶ್ವಸಂಸ್ಥೆಯ ಸಾಮಾನ್ಯ ಸಭೆಯಲ್ಲಿ ಸೇರಿದ್ದ 75 ದೇಶಗಳ 250 ಸಂಘಟನೆಗಳು ವರದಿ ಮಂಡಿಸಿವೆ. ಭಾರತದಲ್ಲಿ ಸಾರ್ವಜನಿಕ ಕಾರ್ಯಕ್ರಮಗಳಲ್ಲಿ ಊಟದ ಎಲೆಗಳಲ್ಲಿ ವ್ಯರ್ಥವಾಗುವ ಆಹಾರ ಪ್ರಮಾಣ ಕಡಿಮೆಯಾಗಬೇಕು. ರೈತರ ಶ್ರಮಕ್ಕೆ ಗೌರವ ನೀಡಬೇಕು ಎಂದರು.

ಭಾರತ ಸರ್ಕಾರ 2013ರಲ್ಲಿ ಜಾರಿಗೆ ತಂದ ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆಯನ್ನು ಮೊಟ್ಟಮೊದಲು ಜಾರಿಗೆ ತಂದ ರಾಜ್ಯ ಕರ್ನಾಟಕ. ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯರವರು ಮೊದಲ ಅವಧಿ ಮತ್ತು ಎರಡನೇ ಅವಧಿಯಲ್ಲಿ ಅನ್ನಭಾಗ್ಯ ಯೋಜನೆಗೆ ಅತ್ಯಂತ ಪ್ರಾಮುಖ್ಯತೆ ಕೊಡುವ ಮೂಲಕ ಕರ್ನಾಟಕ ರಾಜ್ಯ ಹಸಿವುಮುಕ್ತ ಕರ್ನಾಟಕವಾಗಿಸಿರುವುದು ನಮ್ಮ ಸರ್ಕಾರದ ಹೆಮ್ಮೆಯ ವಿಷಯವಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಉಪ ಮುಖ್ಯಮಂತ್ರಿಗಾಳದ ಡಿ.ಕೆ ಶಿವಕುಮಾರ್, ವಸತಿ ಸಚಿವರಾದ ಜಮೀರ್ ಅಹ್ಮದ್ ಖಾನ್, ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ ನಜೀರ್ ಅಹ್ಮದ್, ಶಾಸಕರಾದ ರವಿ, ಬಸವಣಗೌಡ ಬಾದರ್ಲಿ, ಶ್ರೀನಿವಾಸ್, ಆರ್ಯವೈಶ್ಯ ನಿಗಮದ ಅಧ್ಯಕ್ಷರಾದ ರಾಮಪ್ರಸಾದ್, ಆಹಾರ ಇಲಾಖೆಯ ಆಯುಕ್ತರಾದ ವಾಸಿ ರೆಡ್ಡಿ ಜೋತ್ಸನಾ, ಕರ್ನಾಟಕ ಆಹಾರ ನಿಗಮದ ವ್ಯವಸ್ಥಾಪಕ ನಿರ್ದೇಶಕರಾದ ಜಗದೀಶ್, ಕಾನೂನು ಮಾಪನ ಶಾಸ್ತ್ರ ಇಲಾಖೆಯ ನಿಯಂತ್ರಕ ಬಾಬು, ಸಚಿವರ ಆಪ್ತ ಕಾರ್ಯದರ್ಶಿ ಡಾ. ಹೆಚ್. ನಟರಾಜ್ ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

### ಅಂತರರಾಜ್ಯ ಸಹಕಾರ ಸಭೆ ಹಾಗೂ ದೀಪಸ್ತಂಭ ಪುರಸ್ಕಾರ ಸಮಾರಂಭ

# ಸಹಕಾರ ಬಂಧದ ನವ ಹಾದಿ – ಕರ್ನಾಟಕ ಮತ್ತು ಮಹಾರಾಷ್ಟ್ರ ಮಹಾಮಂಡಳಗಳ ಸಮನ್ವಯ ಎಸ್.ಚಂದ್ರಶೇಖರ



**ಕುಮಟಾ (ಕಾರವಾರ ಜಿಲ್ಲೆ) :** ಮಹಾರಾಷ್ಟ್ರ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ಹಾಗೂ ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ಸಂಯುಕ್ತ ಆಶ್ರಯದಲ್ಲಿ ಅಕ್ಟೋಬರ್ 12 ಮತ್ತು 13ರಂದು ಕಾರವಾರ ಜಿಲ್ಲೆಯ ಕುಮಟಾದಲ್ಲಿರುವ ಡೆನಿಸನ್ಸ್ (Denissons) ಬೀಚ್ ರೆಸಾರ್ಟ್‌ನಲ್ಲಿ ಅಂತರರಾಜ್ಯ ಸಹಕಾರ ಸಭೆ ಹಾಗೂ ದೀಪಸ್ತಂಭ ಪುರಸ್ಕಾರ ಸಮಾರಂಭ ವಿಜೃಂಭಣೆಯಿಂದ ನೆರವೇರಿತು.

ಈ ಸಭೆಯ ಮುಖ್ಯ ಉದ್ದೇಶ ಕರ್ನಾಟಕ ಮತ್ತು ಮಹಾರಾಷ್ಟ್ರ ರಾಜ್ಯಗಳ ಪತ್ತಿನ ಸಂಘಗಳ ಕಾರ್ಯವೈಖರಿ, ಸಹಕಾರ ಕಾಯ್ದೆಗಳ ವಿಶ್ಲೇಷಣೆ, ಉಭಯ ರಾಜ್ಯಗಳ ಅನುಭವ ಹಂಚಿಕೆ ಹಾಗೂ ಭವಿಷ್ಯದ ಸಹಕಾರ ಚಟುವಟಿಕೆಗಳ ಬಲಪಡಿಸುವತ್ತ ನೋಟ ಕೇಂದ್ರೀಕೃತವಾಗಿತ್ತು.

**ಉದ್ಘಾಟನೆ ಮತ್ತು ಕಾರ್ಯಕ್ರಮದ ಆರಂಭ :** ಕಾರ್ಯಕ್ರಮವು ಎರಡೂ ರಾಜ್ಯಗಳ ನಾಡಗೀತೆಗಳೊಂದಿಗೆ ಭಾವಪೂರ್ಣವಾಗಿ ಆರಂಭವಾಯಿತು. ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ಅಧ್ಯಕ್ಷರಾದ ಚಂದ್ರಶೇಖರ್ ಎಸ್. ಅವರು ಸಹಕಾರ ಧ್ವಜಾರೋಹಣದ ಮೂಲಕ ಸಭೆಗೆ ಚಾಲನೆ ನೀಡಿದರು. ಸಭೆಯ ಅಧ್ಯಕ್ಷತೆಯನ್ನು ಮಹಾರಾಷ್ಟ್ರ ರಾಜ್ಯ ಪತ್ತಿನ ಸಹಕಾರ ಮಹಾಮಂಡಳದ ಅಧ್ಯಕ್ಷರಾದ ಕಾಕಾಸಾಹೇಬ್ ಕೊಯ್ತೆ ಅವರು ವಹಿಸಿದ್ದರು. ವೇದಿಕೆಯ ಮೇಲೆ ಉಭಯ ರಾಜ್ಯಗಳ ಗಣ್ಯರು ಉಪಸ್ಥಿತರಿದ್ದರು.

ಸಂಚಾಲಕರಾಗಿ ಡಾ. ಸಂಜಯ ಪಂಚಾಕ್ಷರಿ ಹೊಸಮಠ, ಮಹಾಮಂಡಳದ ಉಪಾಧ್ಯಕ್ಷ ಧರೇಪ್ಪ ಮಹದೇವ ಆಲಗೂರ, ನಿರ್ದೇಶಕರುಗಳಾದ ತಮ್ಮಣ್ಣ ಬಾಲಪ್ಪ ಕೆಂಚರೆಡ್ಡಿ, ಉಮೇಶ್ ಬಾಳಿ, ಮಹಾರಾಷ್ಟ್ರ ಫೆಡರೇಶನ್‌ನ ಸಂಚಾಲಕರಾದ ಶಶಿಕಾಂತ್ ರಾಜೋಬಾ, ಭಾಸ್ಕರ್ ಬಂಗಾರ, ಬೆಳಗಾವಿ ಪ್ರಾಂತೀಯ ಸಹಕಾರ ಸಂಘಗಳ ಜಂಟಿ ನಿಬಂಧಕರಾದ ಕಲ್ಲಪ್ಪ ಓಬಣ್ಣಗೋಳ ಹಾಗೂ ಮಹಾರಾಷ್ಟ್ರದ ಸಹಕಾರ ಸಂಘಗಳ ಅಪರ ನಿಬಂಧಕರು, ವಾಡೇಕರ್ ವೇದಿಕೆ ಮೇಲೆ ಉಪಸ್ಥಿತರಿದ್ದರು.

**ಸಭೆಯ ಉದ್ದೇಶಗಳು ಮತ್ತು ಚರ್ಚೆಗಳು :** ಸ್ವಾಗತ ಭಾಷಣವನ್ನು ಶಶಿಕಾಂತ್ ರಾಜೋಬಾ ಅವರು ಅತಿಥಿಗಳನ್ನು ಬರಮಾಡಿಕೊಂಡರು. ಭಾಸ್ಕರ್ ಬಂಗಾರ ಅವರು ಸಭೆಯ ಧ್ಯೇಯ, ಉದ್ದೇಶ ಮತ್ತು ದೀಪಸ್ತಂಭ ಪುರಸ್ಕಾರದ ಪ್ರೇರಣೆಯ ಕುರಿತು ವಿವರಿಸಿದರು.

ಉದ್ಘಾಟನಾ ಭಾಷಣದಲ್ಲಿ, ಅಧ್ಯಕ್ಷರಾದ ಚಂದ್ರಶೇಖರ್ ಎಸ್. ಅವರು ಮಾತನಾಡುತ್ತಾ, “ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳವು ಕಳೆದ ಹಲವು ವರ್ಷಗಳಿಂದ







ಪತ್ತಿನ ಸಂಘಗಳ ಶಕ್ತೀಕರಣಕ್ಕೆ ಮುಂಚೂಣಿಯಲ್ಲಿದೆ. ಸಹಕಾರ ಚಳವಳಿಯನ್ನು ಗ್ರಾಮಮಟ್ಟದಿಂದ ರಾಜ್ಯಮಟ್ಟಕ್ಕೆ ತಲುಪಿಸುವ ಕಾರ್ಯದಲ್ಲಿ ಎಲ್ಲರ ಸಹಭಾಗಿತ್ವ ಅಗತ್ಯ.” ಎಂದು ಹೇಳಿದರು. ಅವರು ಮುಂದಿನ ಅಂತರರಾಜ್ಯ ಸಹಕಾರ ಸಭೆಯನ್ನು ಮೈಸೂರು ನಗರದಲ್ಲಿ ಆಯೋಜಿಸಲು ಆಹ್ವಾನ ನೀಡಿದರು.

ಮುಖ್ಯ ಅತಿಥಿಗಳ ಪರವಾಗಿ ಮಾತನಾಡಿದ ಡಾ. ಸಂಜಯ ಪಂಚಾಕ್ಷರಿ ಹೊಸಮಠ ಅವರು ಕರ್ನಾಟಕ ರಾಜ್ಯದ ಪತ್ತಿನ ಸಂಘಗಳ ಕಾರ್ಯಪದ್ಧತಿ, ಸವಾಲುಗಳು ಹಾಗೂ ಮಹಾಮಂಡಳವು ಪತ್ತಿನ ಸಂಘಗಳ ಮಾತೃ ಸಂಸ್ಥೆಯಾಗಿ ನಿಭಾಯಿಸುತ್ತಿರುವ ಪ್ರಮುಖ ಪಾತ್ರವನ್ನು ವಿವರಿಸಿದರು. “ಪತ್ತಿನ ಸಂಘಗಳಲ್ಲಿ ಎದುರಾಗುತ್ತಿರುವ ಆದಾಯ ತೆರಿಗೆ ಮತ್ತು ನಿಯಂತ್ರಣ ಸಂಬಂಧಿತ ಸಮಸ್ಯೆಗಳನ್ನು ಪರಿಹರಿಸಲು ಮಹಾಮಂಡಳವು ಸರ್ಕಾರದೊಂದಿಗೆ ನಿರಂತರವಾಗಿ ಸಂವಾದ ನಡೆಸುತ್ತಿದೆ.” ಎಂದು ಹೇಳಿದರು.

ಜಂಟಿ ನಿಬಂಧಕರಾದ ಕಲ್ಲಪ್ಪ ಓಬಣ್ಣಗೋಳ ಅವರು ಕರ್ನಾಟಕ ರಾಜ್ಯದ ಸಹಕಾರ ಕಾಯ್ದೆಯ ವಿಶ್ಲೇಷಣೆ ಮಾಡಿ ಅದರ ನವೀಕರಣದ ಅಗತ್ಯವನ್ನು ಚರ್ಚಿಸಿದರು.

**ದೀಪಸ್ತಂಭ ಪುರಸ್ಕಾರ – ಮಾರ್ಗದರ್ಶಕ ಸಂಘಗಳಿಗೆ ಗೌರವ :** ಸಭೆಯ ವಿಶೇಷ ಆಕರ್ಷಣೆಯಾಗಿ ನಡೆದ ದೀಪಸ್ತಂಭ ಪುರಸ್ಕಾರ ಸಮಾರಂಭದಲ್ಲಿ ಮಹಾರಾಷ್ಟ್ರ ರಾಜ್ಯದ ಸುಮಾರು ನೂರು ಪತ್ತಿನ ಸಂಘಗಳನ್ನು ಅವರ ಶ್ರೇಷ್ಠ ಕಾರ್ಯದಕ್ಷತೆಗಾಗಿ ಗೌರವಿಸಲಾಯಿತು.

ಈ ಸಂದರ್ಭದಲ್ಲಿ ಮಹಾರಾಷ್ಟ್ರ ಫೆಡರೇಶನ್‌ನ ಅಧ್ಯಕ್ಷ ಕಾಕಾಸಾಹೇಬ್ ಕೊಯ್ತೆ ಅವರು ಪುರಸ್ಕಾರದ ಅರ್ಥವನ್ನು ಹೀಗಾಗಿ ವಿವರಿಸಿದರು. “ದೀಪಸ್ತಂಭವು ಸಮುದ್ರದಲ್ಲಿ ಹಡಗುಗಳಿಗೆ ದಾರಿ ತೋರಿಸುವ ಬೆಳಕು. ಅದೇ ರೀತಿ, ಈ ಪುರಸ್ಕೃತ ಸಂಸ್ಥೆಗಳು ಸಹಕಾರ ಕ್ಷೇತ್ರಕ್ಕೆ ದಾರಿ ತೋರಿಸುವ ಪ್ರೇರಕ ದೀಪಗಳು. ಅವರ ನಿಷ್ಠೆ, ಪಾರದರ್ಶಕತೆ ಮತ್ತು ಸೇವಾ ಮನೋಭಾವ ಇತರರಿಗೆ ಮಾದರಿ ಆಗಲಿ.” ಸಮುದ್ರ ತೀರದ ಸುಂದರ ವಾತಾವರಣದಲ್ಲಿ ಬೆಳಕು, ಸಾಂಸ್ಕೃತಿಕ ಸೊಬಗು ಮತ್ತು ಸಹಕಾರದ ನಡಿಗೆಯೊಂದಿಗೆ ಈ ಪುರಸ್ಕಾರ ಸಮಾರಂಭವು ಎಲ್ಲರ ಮನ ಗೆದ್ದಿತು.

**ಸಮಾರೋಪ ಮತ್ತು ಮುಕ್ತ ಚರ್ಚೆ :** ಸಭೆಯ ಅಂತ್ಯದಲ್ಲಿ ಉಭಯ ರಾಜ್ಯಗಳ ಅಧಿಕಾರಿಗಳು ಮತ್ತು ನಿರ್ದೇಶಕರು ಪರಸ್ಪರ ಮುಕ್ತ ಚರ್ಚೆ ನಡೆಸಿದರು. ಸಹಕಾರ ಕ್ಷೇತ್ರದ ಸವಾಲುಗಳು, ಹೊಸ ತಂತ್ರಜ್ಞಾನ ಬಳಕೆ ಮತ್ತು ಕಾನೂನುಬದ್ಧ ಬದಲಾವಣೆಗಳ ಕುರಿತು ಆಲೋಚನೆ ವಿನಿಮಯ ಮಾಡಿದರು. ಮಹಾರಾಷ್ಟ್ರ ಫೆಡರೇಶನ್‌ನ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ವಂದನಾರ್ಪಣೆ ಸಲ್ಲಿಸಿದರು.

**ಅಧ್ಯಕ್ಷ ಕಾಕಾಸಾಹೇಬ್ ಕೊಯ್ತೆ ಅವರು ಸಮಾರೋಪ ಭಾಷಣದಲ್ಲಿ :** “ಕರ್ನಾಟಕದಲ್ಲಿ ಕಾರ್ಯಕ್ರಮ ಆಯೋಜಿಸಿದ್ದರಿಂದ ನಮಗೆ ಹೊಸ ಅನುಭವ ಸಿಕ್ಕಿದೆ. ಇದು ಸಹಕಾರದ ನಿಜವಾದ ಅರ್ಥ – ಪರಸ್ಪರ ಕಲಿಕೆ ಮತ್ತು ಸೌಹಾರ್ದ.” ಎಂದು ಹೇಳಿದರು.

**ಸಹಕಾರ ಚಳವಳಿಯ ಹೊಸ ಅಧ್ಯಾಯ :** ಈ ಅಂತರರಾಜ್ಯ ಸಹಕಾರ ಸಭೆ ಮತ್ತು ದೀಪಸ್ತಂಭ ಪುರಸ್ಕಾರ ಸಮಾರಂಭವು ಕರ್ನಾಟಕ ಮತ್ತು ಮಹಾರಾಷ್ಟ್ರ ರಾಜ್ಯಗಳ ನಡುವಿನ ಸಹಕಾರ ಸಂಬಂಧಕ್ಕೆ ಹೊಸ ದಿಕ್ಕು ನೀಡಿದ್ದು, ಪತ್ತಿನ ಸಂಘಗಳ ಶಕ್ತೀಕರಣ ಮತ್ತು ಸಹಕಾರ ಮೌಲ್ಯಗಳ ಪುನರುಜ್ಜೀವನಕ್ಕೆ ಮಹತ್ವದ ಹೆಜ್ಜೆಯಾಗಿದೆ.






## ಅರವಿಂದ್ ತಗಾಡಿಯಾಗೆ ಸಹಕಾರಿ ಶಿರೋಮಣಿ, ಶೈಲಜಾದೇವಿಗೆ ಸಹಕಾರಿ ವಿಭೂಷಣ ಪ್ರಶಸ್ತಿ ಪ್ರದಾನ




**ನವದೆಹಲಿ :** ಭಾರತದ ಪ್ರಮುಖ ರಸಗೊಬ್ಬರ ಸಹಕಾರಿ ಸಂಸ್ಥೆಗಳಲ್ಲಿ ಒಂದಾದ ನವದೆಹಲಿಯ ಕೃಷಕ್ ಭಾರತಿ ಸಹಕಾರಿ ಲಿಮಿಟೆಡ್ (ಕ್ರಿಭ್ಕೋ)ದ 45ನೇ ವಾರ್ಷಿಕ ಸಾಮಾನ್ಯ ಸಭೆ ಇತ್ತೀಚೆಗೆ ನವದೆಹಲಿಯಲ್ಲಿ ನಡೆದಿದ್ದು, ಪ್ರತಿಷ್ಠಿತ ಸಹಕಾರಿ ಶಿರೋಮಣಿ ಪ್ರಶಸ್ತಿ ಮತ್ತು ಸಹಕಾರಿ ವಿಭೂಷಣ ಪ್ರಶಸ್ತಿಯನ್ನು ಪ್ರದಾನ ಮಾಡಿದೆ.

ಗುಜರಾತ್‌ನ ಸಹಕಾರಿ ಚಳವಳಿಯ ವಿಶಿಷ್ಟ ನಾಯಕ ಅರವಿಂದಭಾಯಿ ತಗಾಡಿಯಾ ಅವರಿಗೆ ಸಹಕಾರಿ ಶಿರೋಮಣಿ ಪ್ರಶಸ್ತಿ ನೀಡಲಾಯಿತು. ಗುಜರಾತಿನಾದ್ಯಂತ ಸಹಕಾರಿ ಸಂಸ್ಥೆಗಳನ್ನು ಬಲಪಡಿಸುವಲ್ಲಿ ಅರವಿಂದ ತಗಾಡಿಯಾ ಪ್ರಮುಖ ಪಾತ್ರ ವಹಿಸಿದ್ದರಲ್ಲದೆ, ಹಲವಾರು ಪ್ರಮುಖ ಸಹಕಾರಿ ಸಂಸ್ಥೆಗಳ ಮಂಡಳಿಗಳಲ್ಲಿಯೂ ಸೇವೆ ಸಲ್ಲಿಸುತ್ತಿದ್ದಾರೆ.

ಸಹಕಾರಿ ಮೌಲ್ಯಗಳನ್ನು ಉತ್ತೇಜಿಸುವಲ್ಲಿ ತಳಮಟ್ಟದ ಸಬಲೀಕರಣ ಮತ್ತು ನಾಯಕತ್ವಕ್ಕಾಗಿ ಅವರ ಸಮರ್ಪಣಾ ಮನೋಭಾವ ಸಹಕಾರಿ ವಲಯದ ಅವರಿಗೆ ಹೆಚ್ಚಿನ ಗೌರವ ತಂದಿದೆ. ಇದೇ ಕಾರ್ಯಕ್ರಮದಲ್ಲಿ ಸಹಕಾರಿ ವಿಭೂಷಣ ಪ್ರಶಸ್ತಿಯನ್ನು ಮಹಾರಾಷ್ಟ್ರದ ಶೈಲಜಾದೇವಿ ಡಿ.ನಿಕಮ್ ಅವರಿಗೆ ಪ್ರದಾನ ಮಾಡಲಾಯಿತು. ದಶಕಗಳಿಂದ ಕ್ರಿಭ್ಕೋ ಜೊತೆ ಸಂಬಂಧ ಹೊಂದಿರುವ ಶೈಲಜಾದೇವಿಯವರು, ಕ್ರಿಭ್ಕೋ ಮಂಡಳಿಯಲ್ಲಿ ಸೇವೆ ಸಲ್ಲಿಸಿರುವುದು ಸೇರಿದಂತೆ 40 ವರ್ಷಗಳಿಗೂ ಹೆಚ್ಚು ಕಾಲ ಸಹಕಾರಿ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿದ್ದಾರೆ. ಸಹಕಾರಿ ಬೆಳವಣಿಗೆ ಮತ್ತು ರೈತರ ಕಲ್ಯಾಣಕ್ಕೆ ಅವರ ಕೊಡುಗೆ ಅಪಾರವಾದುದು.

## ಮಹಿಳೆಯರ ಸ್ವಾವಲಂಬನೆಗೆ ಗೃಹಲಕ್ಷ್ಮಿ ಸಹಕಾರ ಸಂಘ ಸ್ಥಾಪನೆ : ಸಚಿವೆ ಲಕ್ಷ್ಮಿ ಹೆಬ್ಬಾಳಕರ್



**ಮೈಸೂರು:** ಪಂಚ ಗ್ಯಾರಂಟಿ ಯೋಜನೆಗಳಲ್ಲಿ ಒಂದಾದ ಗೃಹಲಕ್ಷ್ಮಿ ಫಲಾನುಭವಿಗಳನ್ನು ಸ್ವಯಂ ಉದ್ಯಮಿಗಳನ್ನಾಗಿ ಮಾಡಲು ಸಹಕಾರ ಸಂಘ ಸ್ಥಾಪಿಸಲಾಗುವುದು ಎಂದು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆ ಲಕ್ಷ್ಮಿ ಹೆಬ್ಬಾಳಕರ್ ಹೇಳಿದ್ದಾರೆ.

ಜೆಕೆ ಮೈದಾನದಲ್ಲಿ ದಸರಾ ಮಹೋತ್ಸವ ಪ್ರಯುಕ್ತ ನಡೆದ ಮಹಿಳಾ ದಸರಾ ಉದ್ಘಾಟಿಸಿ, "ಗೃಹಲಕ್ಷ್ಮಿ ರಾಜ್ಯದಲ್ಲಿನ 1.24 ಕೋಟಿ ಯೋಜನೆಯಿಂದ ರಾಜ್ಯದಲ್ಲಿನ 1.24 ಕೋಟಿ ಮಹಿಳೆಯರು ಪ್ರತಿ ತಿಂಗಳು ಎರಡು ಸಾವಿರ ರೂ. ಪಡೆಯುತ್ತಿದ್ದು ಸ್ವಾವಲಂಬಿ ಬದುಕು ನಡೆಸುತ್ತಿದ್ದಾರೆ ಎಂದರು.

ಮುಂದುವರಿದು, ಕೆಲವು ಮಹಿಳೆಯರು ಗೃಹಲಕ್ಷ್ಮಿ ಯೋಜನೆಯಿಂದ ಬಂದ ಹಣವನ್ನು ಕೂಡಿಟ್ಟು ಉದ್ಯಮವನ್ನು ಆರಂಭಿಸಿ ಯಶಸ್ವಿಯಾಗಿದ್ದಾರೆ. ಅವರಿಗೆ ಹೆಚ್ಚಿನ ಮಟ್ಟದಲ್ಲಿ ಉದ್ಯಮ ನಡೆಸಲು ಬ್ಯಾಂಕಿನಲ್ಲಿ ಸಾಲ ಸೌಲಭ್ಯ ಪಡೆಯಲು ಸಾಧ್ಯವಾಗದ ಕಾರಣ ಹಿನ್ನಡೆಯಾಗುತ್ತಿದೆ. ಈ ನಿಟ್ಟಿನಲ್ಲಿ ಗೃಹಲಕ್ಷ್ಮಿ ಫಲಾನುಭವಿಗಳಿಗೆ ಸಾಲ ಸೌಲಭ್ಯ ಕಲ್ಪಿಸಲು ಶೀಘ್ರದಲ್ಲಿಯೇ ಗೃಹಲಕ್ಷ್ಮಿ ಸಹಕಾರ ಸಂಘವನ್ನು ಆರಂಭಿಸಲಾಗುವುದು," ಎಂದು ಹೇಳಿದರು. "ಫಲಾನುಭವಿಗಳು ಪ್ರತಿ ತಿಂಗಳೂ 200 ರೂ.ಗಳನ್ನು ಸಂಘಕ್ಕೆ ಪಾವತಿಸಿ ಸದಸ್ಯರಾದರೆ ಅವರಿಗೆ ಸಂಘದ ಮೂಲಕ 5ರಿಂದ 50 ಲಕ್ಷ ರೂ.ವರೆಗೆ ಸಾಲ ಸೌಲಭ್ಯ ಸಿಗಲಿದೆ. ಈ ಅವಕಾಶವನ್ನು ಸದ್ಬಳಕೆ ಮಾಡಿಕೊಳ್ಳಬೇಕು" ಎಂದು ಮಹಿಳೆಯರಿಗೆ ಸಲಹೆ ಮಾಡಿದರು.

# ನಾಡಿನಾದ್ಯಂತ ಸಡಗರ ಸಂಭ್ರಮದ 70ನೇ ಕನ್ನಡ ರಾಜ್ಯೋತ್ಸವ



ರಾಜ್ಯಾದ್ಯಂತ 70 ನೇ ಕನ್ನಡ ರಾಜ್ಯೋತ್ಸವ ಸಡಗರ ಸಂಭ್ರಮದಿಂದ ಆಚರಿಸಲಾಗಿದೆ. ಏಳು ಕೋಟಿ ಕನ್ನಡಿಗರ ಸಂಭ್ರಮದ ಹಬ್ಬವಾದ ಕನ್ನಡ ರಾಜ್ಯೋತ್ಸವವನ್ನು ಕರ್ನಾಟಕದ ಮೂಲೆ ಮೂಲೆಗಳಲ್ಲಿ ಹೊರರಾಜ್ಯದ ಹಾಗೂ ವಿದೇಶಗಳಲ್ಲಿ ನೆಲೆಸಿರುವ ಕನ್ನಡಿಗರು ಸಡಗರ ಸಂಭ್ರಮದಿಂದ ಪ್ರತಿವರ್ಷ ಆಚರಿಸುವ ಮೂಲಕ ಭಾಷಾಪ್ರೇಮ ಮರೆಯುವುದು ಕನ್ನಡ ತಾಯಿಗೆ ಸಲ್ಲಿಸುವ ನಿಜವಾದ ಗೌರವವಾಗಿದೆ.

ಕನ್ನಡವೆಂದರೆ ಕೇವಲ ಭಾಷೆಯಲ್ಲ, ಕನ್ನಡವೆಂದರೆ ಜೀವನ ಧರ್ಮ ಕನ್ನಡವೆಂದರೆ ಉಸಿರು, ಕನ್ನಡವೆಂದರೆ ಸಂಸ್ಕೃತಿ, ಕನ್ನಡವೆಂದರೆ ನಿರಂತರ ಹರಿಯುವ ನದಿ, ಜೀವನಕ್ಕೆ ತಂಪು ನೀಡುವ ತಂಗಾಳಿ.

ಜಗತ್ತಿನ ಅತ್ಯಂತ ಸುಂದರ ಭಾಷೆಗಳಲ್ಲಿ ಕನ್ನಡಕ್ಕೆ ಅಗ್ರಸ್ಥಾನ, ಕನ್ನಡಕ್ಕೆ ಜಗತ್ತಿನ ಭಾಷೆಗಳ ರಾಣಿ ಎಂಬ ಹೆಗ್ಗಳಿಕೆ ಇದೆ. ಬರೆದಂತೆ ಮಾತನಾಡುವ ಯಾವುದಾದರೂ ಸುಂದರ ಸುಲಲಿತ ಭಾಷೆಯಿದ್ದರೆ ಅದು ಕನ್ನಡ ಭಾಷೆ ಮಾತ್ರ. ಯಾವುದಾದರೂ ಭಾಷೆಯ ಹೆಸರಿನಲ್ಲಿ ಶಾಸ್ತ್ರೀಯ ಸಂಗೀತದ ರಾಗ ಗುರುತಿಸಿಕೊಂಡಿದ್ದಾರೆ. ಅದು ಕರ್ನಾಟಕ ಸಂಗೀತ ಮಾತ್ರ. ನೂರಾರು ರೀತಿಯ ಹೆಗ್ಗಳಿಕೆಗೆ ಪಾತ್ರವಾಗಿರುವ ಹೆಮ್ಮೆಯ ಕನ್ನಡ ಭಾಷೆಗೆ ಎರಡು ಸಾವಿರ ವರ್ಷಗಳ ಇತಿಹಾಸವಿದೆ. ತಮಿಳು ಭಾಷೆಯನ್ನು ಹೊರತು ಪಡಿಸಿದರೆ ಕನ್ನಡ ಅತ್ಯಂತ ಪ್ರಾಚೀನ ಭಾಷೆ ಎಂಬ ಹೆಗ್ಗಳಿಕೆ ಪಾತ್ರವಾಗಿದ್ದು, ಎರಡು ಸಾವಿರ ವರ್ಷಗಳ ಹಿಂದಿನ ಹಲ್ಮಿಡಿ ಶಾಸನದಲ್ಲಿ ಕನ್ನಡ ಅಕ್ಷರಗಳ ಉಲ್ಲೇಖವಿದೆ, ಆದರೆ ಭಾಷಾ ಶಾಸ್ತ್ರಜ್ಞರು ಕನ್ನಡ ಅದಕ್ಕಿಂತ ಪುರಾತನ ಭಾಷೆಯಾಗಿದೆ ಎಂದು ಕೆಲವು ದಾಖಲೆಗಳ ಮೂಲಕ ಉಲ್ಲೇಖಿಸುತ್ತಾರೆ.

### ಕನ್ನಡಿಗರು ಮತ್ತು ರಾಜ್ಯೋತ್ಸವ

ನವೆಂಬರ್ 1 ಎಂದರೇನೇ ಅದೇನೋ ಖುಷಿ... ಅದೇನೋ ಸಡಗರ... ನಮ್ಮ ಹೆಮ್ಮೆಯ ಕರುನಾಡು ರೂಪುಗೊಂಡ ದಿನವದು. ದಕ್ಷಿಣ ಭಾರತದ ಕನ್ನಡ ಮಾತನಾಡುವ ಎಲ್ಲಾ ಪ್ರದೇಶಗಳನ್ನು ವಿಲೀನಗೊಳಿಸಿ ಒಂದು ರಾಜ್ಯವನ್ನು ಘೋಷಣೆ ಮಾಡಿದ ಈ ದಿನವನ್ನು ಕನ್ನಡಿಗರು ಅತ್ಯಂತ ವಿಜೃಂಭಣೆಯಿಂದ ಆಚರಿಸುತ್ತಾರೆ. ಕರ್ನಾಟಕದಲ್ಲಿ ಮಾತ್ರವಲ್ಲ, ದೇಶ ವಿದೇಶದಲ್ಲಿ ನೆಲೆಸಿರುವ ಕನ್ನಡಿಗರು ಈ ದಿನವನ್ನು ಅತ್ಯಂತ ಪ್ರೀತಿ, ಹೆಮ್ಮೆಯಿಂದ ಆಚರಣೆ ಮಾಡುತ್ತಾರೆ.

ಕನ್ನಡ, ಕರ್ನಾಟಕ ಬರೀ ಭಾಷೆಯಲ್ಲ, ಬರೀ ನೆಲವಲ್ಲ ಅದೊಂದು ಭಾವನಾತ್ಮಕ ಸಂಬಂಧ, ಎಂದೂ ಬಿಡಿಸಲಾರದ ಬಾಂಧವ್ಯ. ಕರುನಾಡು ಎಂಬ ಪದವೇ ಅಮೃತಕ್ಕೆ ಸಮಾನ. ನಮ್ಮ ಹೆಮ್ಮೆ ಸರ್ವ ಜನಾಂಗದ ಈ ಶಾಂತಿಯ ತೋಟ. ಇಂತಹ ಹೆಮ್ಮೆಯ ಕರುನಾಡು ಉದಯಿಸಿದ ಈ ದಿನದಂದು ಕನ್ನಡಾಂಬೆಯ ಭಾವಚಿತ್ರದ ಮೆರವಣಿಗೆ, ಕನ್ನಡ ಬಾವುಟದ ಹಾರಾಟ, ಜೈಕಾರ, ಕರುನಾಡ ಸಂಸ್ಕೃತಿ–ಇತಿಹಾಸ ಸಾರುವ ಹಾಡಿನ ಮೂಲಕ ಕನ್ನಡದ ಸಿರಿವಂತಿಕೆಯ ಸೊಗಡು ಎಲ್ಲೆಲ್ಲೂ ಅನುರಣಿಸುತ್ತಿರುತ್ತದೆ.

ಕನ್ನಡ ನಮ್ಮ ಅಮ್ಮ... ಕನ್ನಡ ನಮ್ಮ ಉಸಿರು... ಕನ್ನಡವೇ ನಮ್ಮ ಬದುಕು. ಇದು ಒಂದು ದಿನದ ಹಬ್ಬವಲ್ಲ. ಬದುಕಿನುದ್ದಕ್ಕೂ ಕನ್ನಡ ಪ್ರೀತಿ ಮೆರೆಯೋಣ... ಕನ್ನಡಾಂಬೆಯ ಸೇವೆ ಮಾಡೋಣ.


ವೈಭವದ ಇತಿಹಾಸವುಳ್ಳ ನಾಡಿದು, ಸಿರಿ ಸಂಸ್ಕೃತಿಯ ಬೀಡಿದು, ಕಲೆ ಸಾಹಿತ್ಯದ ತವರೂರಿದು. ಈ ಪುಣ್ಯ ನೆಲದಲ್ಲಿ ಜನಿಸಿದ ನಾವೇ ಧನ್ಯ. ಎಲ್ಲಾದರು ಇರು, ಎಂತಾದರೂ ಇರು. ಎಂದೆಂದಿಗೂ ನೀ ಕನ್ನಡವಾಗಿರು. ಕನ್ನಡವೇ ಸತ್ಯ, ಕನ್ನಡವೇ ನಿತ್ಯ... ಕುವೆಂಪು ಅವರ ಈ ಅಪೂರ್ವ ಸಾಲುಗಳು ಬದುಕಿನ ದಾರಿಯಾಗಿದೆ.

### ಕನ್ನಡ ಎಂದರೆ ಅಮೃತ... ಕರುನಾಡಿನ ಮಣ್ಣೇ ಸಿರಿಗಂಧ

ಗಂಧದಬಿಡು, ಹೊನ್ನಿನ ನಾಡು ಎಂಬ ಹೆಗ್ಗಳಿಕೆಗೆ ಪಾತ್ರವಾಗಿರುವ ಕರ್ನಾಟಕದಲ್ಲಿ ಪ್ರಕೃತಿಯ ಎಲ್ಲಾ ವಿಧದ ತಾಣಗಳನ್ನು ನೋಡಬಹುದು, ಮಲೆನಾಡು, ಕರಾವಳಿ, ಬಯಲು ಸೀಮೆ, ಪಶ್ಚಿಮ ಘಟ್ಟಗಳು, ಉಕ್ಕಿಹರಿಯುವ ಕೃಷ್ಣೆ, ಕಾವೇರಿ, ತುಂಗಾಭದ್ರೆ, ದುಮುಕ್ಕುವ ಜೋಗದ ಜಲಪಾತ ಹೀಗೆ ಪ್ರಕೃತಿ ಮಾತೆಯ ವೈವಿಧ್ಯಮಯ ವೈಭವವನ್ನು ಕರ್ನಾಟಕದಲ್ಲಿ ನೋಡ ಬಹುದಾಗಿದೆ.

ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ಜಾಗತಿಕ ಸಾಧನೆ ಮಾಡಿದ ಕರ್ನಾಟಕ ಇಂದು ಭಾರತ ಮಾತ್ರ ವಲ್ಲದೆ ಜಗತ್ತಿನ ಲಕ್ಷಾಂತರ ಮಂದಿಗೆ ಉದ್ಯೋಗ ಆಶ್ರಯ ನೀಡಿದ ಹೆಗ್ಗಳಿಕೆಗೆ ಪಾತ್ರವಾಗಿದೆ.

ಇಂಗ್ಲಿಷ್ ಭಾಷೆಯ ಆರ್ಭಟದ ನಡುವೆ ಕನ್ನಡ ಭಾಷೆಯನ್ನು ಅನ್ನದ ಭಾಷೆಯನ್ನಾಗಿ ಮಾಡಿ ನಮ್ಮ ಮುಂದಿನ ಜನಾಂಗ ಕನ್ನಡ ಭಾಷೆಯ ಮೂಲಕವೆ ತಮ್ಮ ಅನ್ನವನ್ನು ಗಳಿಸಿ ಜೀವನ ಸಾರ್ಥಕವಾಗುವಂತೆ ಮಾಡಲು ರಾಜ್ಯದಲ್ಲಿ ಆಡಳಿತ ನಡೆಸುವ ನಾಗರಿಕ ಸರ್ಕಾರಗಳು ದೀರ್ಘಾವಧಿಯ ವೈಜ್ಞಾನಿಕ ಯೋಜನೆ ರೂಪಿಸಿ ಕನ್ನಡ ಭಾಷೆಯನ್ನು ಇನ್ನಷ್ಟು ಸದೃಢ ಮತ್ತು ಸಶಕ್ತಗೊಳಿಸಿದರೆ ಮಾತ್ರ ಪ್ರತಿ ವರ್ಷದ ರಾಜ್ಯೋತ್ಸವ ಆಚರಣೆಗೆ ಅರ್ಥಬರುತ್ತದೆ.




### ರಾಜ್ಯೋತ್ಸವ ಪ್ರಶಸ್ತಿ ಆಯ್ಕೆಗೆ ವಿಶೇಷ ಸಮಿತಿ

ರಾಜ್ಯೋತ್ಸವ ಪ್ರಶಸ್ತಿಗೆ ಅರ್ಜಿ ಆಹ್ವಾನಿಸದೆ ವಿವಿಧ ಕ್ಷೇತ್ರದ ಸಾಧಕರಿಗೆ ಸಮಿತಿಯ ಆಯ್ಕೆ ಮಾಡುವ ಮೂಲಕ ಹೊಸ ಮಾದರಿ ಜಾರಿಗೆ ತರಲಾಗಿದೆ. 'ರಾಜ್ಯೋತ್ಸವ ಪ್ರಶಸ್ತಿ'ಗೆ ವಿವಿಧ ಕ್ಷೇತ್ರಗಳ ಸಾಧಕರ ಆಯ್ಕೆಗೆ ಸಂಬಂಧಿಸಿದಂತೆ ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ್ ತಂಗಡಗಿ ಅಧ್ಯಕ್ಷತೆಯಲ್ಲಿ 47 ಸದಸ್ಯರನ್ನೊಳಗೊಂಡ ಸಲಹಾ ಸಮಿತಿಯನ್ನು ಸರ್ಕಾರ ರಚಿಸಿದೆ.

ಈ ಸಮಿತಿಯು ಸಾಹಿತ್ಯ, ವೈದ್ಯಕೀಯ, ಕೃಷಿ, ಸಮಾಜಸೇವೆ, ಚಲನಚಿತ್ರ, ಕ್ರೀಡೆ ಸೇರಿ ವಿವಿಧ ಕ್ಷೇತ್ರಗಳ ತಜ್ಞರನ್ನು ಒಳಗೊಂಡಿದೆ.

ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಕನ್ನಡ ಪುಸ್ತಕ ಪ್ರಾಧಿಕಾರ, ಗಡಿ ಅಭಿವೃದ್ಧಿ ಪ್ರಾಧಿಕಾರ, ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ, ಕರ್ನಾಟಕ ನಾಟಕ ಅಕಾಡೆಮಿ, ಕರ್ನಾಟಕ ಲಲಿತಕಲಾ ಅಕಾಡೆಮಿ, ಕರ್ನಾಟಕ ಶಿಲ್ಪಕಲಾ ಅಕಾಡೆಮಿ, ಕರ್ನಾಟಕ ಯಕ್ಷಗಾನ ಅಕಾಡೆಮಿ, ಕರ್ನಾಟಕ ಜಾನಪದ ಅಕಾಡೆಮಿ, ಕರ್ನಾಟಕ ಚಲನಚಿತ್ರ ಅಕಾಡೆಮಿ ಹಾಗೂ ಕರ್ನಾಟಕ ಮಾಧ್ಯಮ ಅಕಾಡೆಮಿ ಪ್ರತಿನಿಧಿಗಳು ಸಮಿತಿಯ ಪದನಿಮಿತ್ತ ಸದಸ್ಯರಾಗಿದ್ದಾರೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕರು ಸದಸ್ಯ ಕಾರ್ಯದರ್ಶಿಯಾಗಿದ್ದಾರೆ.

ನಟ ರವಿಚಂದ್ರನ್, ನಟಿ ಗಿರಿಜಾ ಲೋಕೇಶ್ ಸೇರಿದಂತೆ ಡಾ. ಸಿ.ಆರ್. ಚಂದ್ರಶೇಖರ್, ಮಾಲತಿ ಪಟ್ಟಣಶೆಟ್ಟಿ, ಸುಬ್ಬು ಹೊಲೆಯಾರ್, ಅಪ್ಪಗೆರೆ ತಿಮ್ಮರಾಜು, ಯಲ್ಲಪ್ಪ ರೆಡ್ಡಿ ಸೇರಿದಂತೆ ಹಲವರು ಸಲಹಾ ಸಮಿತಿ ಸದಸ್ಯರಾಗಿದ್ದಾರೆ. ಕರ್ನಾಟಕ ರಾಜ್ಯೋತ್ಸವದ 70ನೇ ವರ್ಷಾಚರಣೆ ಅಂಗವಾಗಿ ಈ ಬಾರಿ 70 ಸಾಧಕರಿಗೆ ಸರ್ಕಾರವು ರಾಜ್ಯೋತ್ಸವ ಪ್ರಶಸ್ತಿ ಪ್ರಕಟಿಸಿದೆ. ಪ್ರಶಸ್ತಿಯು ತಲಾ 5 ಲಕ್ಷ ರೂಪಾಯಿ ನಗದು ಹಾಗೂ 25 ಗ್ರಾಂ. ಚಿನ್ನದ ಪದಕ ಒಳಗೊಂಡಿದೆ.

ಪ್ರಶಸ್ತಿಗೆ ಅರ್ಹ ವ್ಯಕ್ತಿಗಳನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ರಚಿಸಲಾಗಿರುವ ಸಲಹಾ ಸಮಿತಿ ಹಾಗೂ ಉನ್ನತ ಮಟ್ಟದ ಆಯ್ಕೆ ಸಮಿತಿಗಳು ಅಂತಿಮಗೊಳಿಸಿದೆ. ಎಂಟು ಜ್ಞಾನ ಪೀಠ ಪ್ರಶಸ್ತಿಯ ಹೆಗ್ಗಳಿಕೆಗೆ ಪಾತ್ರವಾಗಿರುವ ಕನ್ನಡ ಭಾಷೆ. ಅಂತಾರಾಷ್ಟ್ರೀಯ ಬೂಕರ್ ಪ್ರಶಸ್ತಿಯ ಗರಿಯನ್ನು ತನ್ನದಾಗಿಸಿಕೊಂಡಿದೆ. ದಕ್ಷಿಣ ಭಾರತದ ರಾಜ್ಯಗಳಲ್ಲಿ ಪ್ರಥಮ ಬೂಕರ್ ಪ್ರಶಸ್ತಿ ಪಡೆದ ಭಾಷೆಯೆಂದರೆ ಅದು ನಮ್ಮ ಕಸ್ತೂರಿ ಕನ್ನಡ. ಕನ್ನಡವು ಜಗತ್ತಿಗೆ ವಚನ ಸಾಹಿತ್ಯ, ವಿಶೇಷ ಜಾನಪದ ಸಾಹಿತ್ಯವನ್ನು ನೀಡಿದೆ. ಕನ್ನಡವೆಂದರೆ ಕೇವಲ ಭಾಷೆಯಲ್ಲ ಅದು ಬದುಕು,ಅದುವೆ ಜೀವನ, ಅದೇ ಜೀವನ ಶೈಲಿ. ಕನ್ನಡಿಗರಿಗೆ ಕನ್ನಡವೆ ಧರ್ಮ. ಕನ್ನಡ ಸರ್ವರಿಗೂ ಒಳಿತನ್ನೆ ಬಯಸುವ ಜಗತ್ತಿನ ಅಪರೂಪದ ಭಾಷೆಯಾಗಿದೆ.

**– ಸವಿತಾ ನಾಯ್ಕ್**



### ಹಾಪ್ ಕಾಮ್ಸ್, ಡಿಎಸ್ಎಂಎಸ್ ಹಾಗೂ ಟಿಎಪಿಸಿಎಂಎಸ್‌ಗೆ ಶ್ರೀ ಬಿ.ಡಿ. ಭೂಕಾಂತ್ ಆಯ್ಕೆ



ಪತ್ತಿನ ಮಹಾಮಂಡಳದ ನಿರ್ದೇಶಕರಾದ ಶ್ರೀ ಬಿ.ಡಿ. ಭೂಕಾಂತ್ ರವರು ಶಿವಮೊಗ್ಗ ಜಿಲ್ಲಾ ಹಾಪ್‌ಕಾಮ್ಸ್ ಮತ್ತು ಶಿವಮೊಗ್ಗ ಜಿಲ್ಲಾ ಡಿಎಸ್ಎಂಎಸ್ ಹಾಗೂ ಶಿಕಾರಿಪುರ ಟಿಎಪಿಸಿಎಂಎಸ್‌ಗೆ ನಡೆದ ಚುನಾವಣೆಯಲ್ಲಿ ಆಯ್ಕೆಯಾಗಿರುತ್ತಾರೆ.

# ಸರ್ವಕಾಲಕ್ಕೂ ಸಲ್ಲುವ ದಾಸ ಶ್ರೇಷ್ಠ ಕನಕದಾಸರ ಸಂದೇಶಗಳು

ಕುಲ ಕುಲವೆಂದು ಹೊಡೆದಾಡದಿರಿ ನಿಮ್ಮ
ಕುಲದ ನೆಲೆಯನೇನಾದರೂ ಬಲ್ಲಿರಾ ॥ ಪ ॥

ಹುಟ್ಟದ ಯೋನಿಗಳಿಲ್ಲ ಮೆಟ್ಟದ ಭೂಮಿಗಳಿಲ್ಲ
ಅಟ್ಟು ಉಣ್ಣದ ವಸ್ತುಗಳಿಲ್ಲ
ಗುಟ್ಟು ಕಾಣಿಸಬಂತು ಹಿರಿದೇನು ಕಿರಿದೇನು
ನೆಟ್ಟನೆ ಸರ್ವಜ್ಞನ ನೆನೆಕಂಡ್ಯ ಮನುಜಾ ॥ 1 ॥

ಜಲವೇ ಸಕಲ ಕುಲಕ್ಕೆ ತಾಯಲ್ಲವೆ
ಜಲದ ಕುಲವನೇನಾದರೂ ಬಲ್ಲಿರಾ
ಜಲದ ಬೊಬ್ಬುಳಿಯಂತೆ ಸ್ಥಿರವಿಲ್ಲವೀ ದೇಹಾ
ನೆಲೆಯರಿತು ನೀ ನೆನೆಕಂಡ್ಯ ಮನುಜಾ ॥

ಹರಿಯೇ ಸರ್ವೋತ್ತಮ ಹರಿಯೇ ಸರ್ವೇಶ್ವರ
ಹರಿಮಯ ನೆಲೆಯಾದಿ ಕೇಶವರಾಯನ
ಸಿರಿತಾನಾಗಿ ನೆಲೆಯಾದಿ ಕೇಶವರಾಯನ
ಚರಣ ಕಮಲವನೇ ಅರ್ಚಿಸುವನೇ ಕುಲಜ.



ಇದು ದಾಸ ಶ್ರೇಷ್ಠ ಕನಕ ದಾಸರು ಮಾನವ ಕುಲಕ್ಕೆ ನೀಡಿದ ಸರ್ವಕಾಲಿಕ ಪ್ರಸಿದ್ಧವಾದ ತತ್ವಶಾಸ್ತ್ರದಿಂದ ಕೂಡಿದ ಪ್ರಮುಖ ಸಂದೇಶ. ಜಾತಿ, ಪಂಥ, ಮೇಲು–ಕೀಳು ಎಂಬ ಭೇದ ಭಾವನೆಗಳ ವಿರುದ್ಧ ಪ್ರತಿಭಟಿಸಿದ್ದು, ಕುಲಕುಲವೆಂದು ಹೊಡೆದಾಡದಿರಿ, ನಿಮ್ಮ ಕುಲದ ನೆಲೆಯನೇನಾದರೂ ಬಲ್ಲಿರಾ ಎಂದು ಸವಾಲು ಹಾಕಿದ್ದು, ಢಂಬಾಚಾರ, ವಿಡಂಬನೆ, ಮುಂಡಿಗೆಯ ಒಗಟಿನಲ್ಲಿ ಪಂಡಿತರನ್ನೂ ಮೂಕರನ್ನಾಗಿಸಿದ್ದು, ದೈವ ಆದರ್ಶವನ್ನು ಗುರು ವ್ಯಾಸರಾಯರಿಗೆ ಮಾಡಿಸಿದರೆನ್ನುವ ಯಶಸ್ಸುಗಳು ಕನಕದಾಸರ ವ್ಯಕ್ತಿತ್ವಕ್ಕೆ ಹಿಡಿದ ಕನ್ನಡಿ.

ಕನಕದಾಸರು ಕರ್ನಾಟಕದಲ್ಲಿ 15–16ನೇ ಶತಮಾನದಲ್ಲಿ ಜನಪ್ರಿಯವಾಗಿದ್ದ ಭಕ್ತಿ ಪಂಥದ ಮುಖ್ಯ ಹರಿದಾಸರಲ್ಲಿ ಒಬ್ಬರಾಗಿದ್ದಾರು. ಕರ್ನಾಟಕ ಸರ್ಕಾರ 2008 ರಿಂದ ಕನಕದಾಸ ಜಯಂತಿಯನ್ನು ಆಚರಿಸಿಕೊಂಡು ಬರುತ್ತಿದೆ. ಪ್ರಮುಖ ಹಾಗೂ ಖ್ಯಾತ ಹರಿಭಕ್ತರಾದ ಕನಕದಾಸರ ಜೀವನದ ಕೆಲವೊಂದು ವಿಚಾರಗಳನ್ನು 2025ರ ಕನಕದಾಸ ಜಯಂತಿಯ ಪ್ರಯುಕ್ತ ಈ ವಿಶೇಷ ಲೇಖನ

### ಕನಕದಾಸರ ಕೃಷ್ಣ ಭಕ್ತಿ

ಕನಕದಾಸರು ಶ್ರೀಕೃಷ್ಣನ ಪರಮ ಭಕ್ತರಾದ್ದರಿಂದ ಅವರಿಗೂ ಉಡುಪಿಯ ಶ್ರೀಕೃಷ್ಣ ಮಠಕ್ಕೂ ಅವಿನಾಭಾವ ಸಂಬಂಧವಿದೆ. ಕನಕದಾಸರು ಮೂಲತಃ ಕುರುಬ ಸಮುದಾಯಕ್ಕೆ ಸೇರಿದ ವ್ಯಕ್ತಿಯಾಗಿದ್ದರು. ಅಂದಿನ ಸಮಾಜ ಜಾತಿಗೆ ಹೆಚ್ಚು ಪ್ರಾಧಾನ್ಯತೆಯನ್ನು ನೀಡುತ್ತಿದ್ದರಿಂದ ಅವರನ್ನು ದೇವಸ್ಥಾನದ ಒಳಗೆ ಪ್ರವೇಶಿಸಲು ಬಿಡಲಿಲ್ಲ. ಕನಕದಾಸರು ಶ್ರೀಕೃಷ್ಣನನ್ನು ಎಷ್ಟು ಪ್ರೀತಿಸುತ್ತಿದ್ದರೋ ಅಷ್ಟೇ ಶ್ರೀಕೃಷ್ಣನು ಅವರನ್ನು ಪ್ರೀತಿಸುತ್ತಿದ್ದ ಕಾರಣ ಕೃಷ್ಣನ ದರ್ಶನ ಭಾಗ್ಯ ಪಡೆಯದೇ ಹತಾಶೆಯಿಂದ ದೇವಸ್ಥಾನದಿಂದ ಹೊರಡುತ್ತಿದ್ದ ಕನಕದಾಸರಿಗೆ ಶ್ರೀಕೃಷ್ಣನು ತಿರುಗಿ ಗೋಡೆಯ ಒಂದು ಕಿಂಡಿಯ ಮೂಲಕ ತನ್ನ ದರ್ಶನವನ್ನು ಕರುಣಿಸುತ್ತಾನೆ. ಇಂದಿಗೂ ಕೃಷ್ಣನ ದೇವಸ್ಥಾನದ ಮುಖ್ಯ ಬಾಗಿಲು ಶಾಶ್ವತವಾಗಿ ಮುಚ್ಚಿದ್ದು, ಶ್ರೀಕೃಷ್ಣನ ವಿಗ್ರಹವು ದೇವಸ್ಥಾನದ ಹಿಂಭಾಗಕ್ಕೆ ಮುಖ ಮಾಡಿದೆ ಎಂದು ಹೇಳಲಾಗುತ್ತದೆ. ಮೇಲಾಗಿ, ಗೋಡೆಯಲ್ಲಿನ ಬಿರುಕು ಅಂದಿನಿಂದ ಕನಕನ ಕಿಟಕಿ ಎಂಬರ್ಥದ 'ಕನಕನ ಕಿಂಡಿ' ಎಂದು ಹೆಸರನ್ನು ಪಡೆದುಕೊಂಡಿತು. ಇಂದಿಗೂ ಭಕ್ತರು ಈ ಕಿಟಕಿಯ ಮೂಲಕ ಶ್ರೀಕೃಷ್ಣನನ್ನು ಭೇಟಿಯಾಗಿ ದರ್ಶನವನ್ನು ಪಡೆದುಕೊಳ್ಳುತ್ತಾರೆ.

ಹರಿಭಕ್ತರಾದ ಕನಕದಾಸರು 1509 ರಂದು ಹಾವೇರಿ ಜಿಲ್ಲೆಯ ಶಿಗ್ಗಾಂವಿ ತಾಲೂಕಿನ ಬಾಡ ಗ್ರಾಮದಲ್ಲಿ ಹಿಂದೂ ಕುರುಬ ಜನಾಂಗಕ್ಕೆ

ಸೇರಿದ ಬಚ್ಚಮ್ಮ ಮತ್ತು ಬೀರಪ್ಪನಾಯಕ ಎಂಬ ದಂಪತಿಗಳ ಮಗನಾಗಿ ಜನಿಸಿದರು. ಕನಕದಾಸರ ಮೂಲ ಹೆಸರು ತಿಮ್ಮಪ್ಪನಾಯಕ. ಸಂತನಾಗುವ ಮೊದಲು ಯೋಧನಾಗಿದ್ದ ಇವರು, ಯುದ್ಧದಲ್ಲಿ ಗಂಭೀರವಾಗಿ ಗಾಯಗೊಂಡರು. ದೇವರ ಲೀಲೆಯಿಂದ ಬದುಕುಳಿದ ನಂತರ ಅವರು ಯೋಧನಾಗಿದ್ದ ಕೆಲಸವನ್ನು ತ್ಯಜಿಸಿ ಹರಿದಾಸರಾದರು ಮತ್ತು ತಮ್ಮನ್ನು ದೇವರ ಸೇವೆಯಲ್ಲಿ ತೊಡಗಿಸಿಕೊಂಡರು.

ಕನಕದಾಸರು ನೂರಾರು ಕೃತಿಗಳನ್ನು, ಒಂದು ಮಹಾಕಾವ್ಯ, ಒಂದು ಕಾವ್ಯ, ಒಂದು ಖಂಡ ಕಾವ್ಯ ಬರೆದಿದ್ದಲ್ಲದೇ ನೂರಾರು ದೇವರ ನಾಮಗಳನ್ನು ನರೆದಿದ್ದರು ಎಂದ ಮೇಲೆ ಕನಕದಾಸರ ಚೇತನ ಎಷ್ಟು ಗಟ್ಟಿಯಾಗಿತ್ತು ಎಂಬುದನ್ನು ನಾವು ಊಹಿಸಿಕೊಳ್ಳಬಹುದು. ಅವರು ಭಗವಂತನನ್ನು ಹುಡುಕಿಕೊಂಡು ಹೋಗಿ ದಾಸರಾದವರಲ್ಲ. ಭಗವಂತನೇ ಅವರನ್ನು ಅರಿಸಿಕೊಂಡು ದಾಸರನ್ನಾಗಿ ಮಾಡಿಕೊಂಡಿದ್ದನು. ಇದು ಕನಕದಾಸರ ಯೋಗ್ಯತೆಯನ್ನು ತಿಳಿಸುತ್ತದೆ.

ಕನಕದಾಸರ ಕಾವ್ಯಗಳು ಕರ್ನಾಟಕ ಶೈಲಿಯಲ್ಲಿ ರಚನೆಯಾದ ಕಾವ್ಯಗಳಾಗಿವೆ. ಅವರು ತಮ್ಮ ಎಲ್ಲಾ ಹಾಡುಗಳಿಗೆ 'ಕಾಗಿನೆಲೆ ಆದಿಕೇಶವ' ಎಂಬ ಕಾವ್ಯನಾಮವನ್ನು ಬಳಸಿದ್ದಾರೆ. ನಳಚರಿತ್ರೆ, ಹರಿಭಕ್ತಿಸಾರ, ನೃಸಿಂಹಸ್ತವ, ರಾಮಧಾನ್ಯಚರಿತ್ರೆ ಮತ್ತು ಮೋಹನತರಂಗಿಣಿ ಅವರ ಕೆಲವು ಪ್ರಸಿದ್ಧ ಕೃತಿಗಳು.

ಕನಕದಾಸರ ಸಾಹಿತ್ಯವನ್ನು ಅವಲೋಕಿಸಿದಲ್ಲಿ ಅಲ್ಲೊಂದು ದರ್ಶನವಿದೆ ಎಂದೆನಿಸುತ್ತದೆ. ತಮ್ಮ ಬದುಕಿನ ದಟ್ಟ ಅನುಭವ, ಮಣ್ಣಿನ ಮಗನಾಗಿದ್ದರಿಂದ ಒದಗಿ ಬಂದ ಅನುಭವ ಭಕ್ತಿ, ಅನುಭಾವ ಅಧ್ಯಾತ್ಮಿಕತೆ, ಎಲ್ಲವೂ ಕನಕದಾಸರ ಕೃತಿಗಳಲ್ಲಿ ಹರಳುಗಟ್ಟಿವೆ. ಹಾಗೆಯೇ ಶೃಂಗಾರ, ವೀರ ರಸ, ಕರುಣ ರಸ ಎಲ್ಲವೂ ಅವರ ಕೃತಿಯಲ್ಲಿ ಬೆಳಗುತ್ತವೆ. ಕಡೆಯದಾಗಿ ಅವರ ಸಂದೇಶ ಮಾನವ ಮತವೊಂದೆ. ಜಾತಿ ಮೊದಲಾದ ಸಣ್ಣ ಭಾವನೆ ಬೇಡ. ದೇವರ ದೃಷ್ಟಿಯಲ್ಲಿ ಎಲ್ಲರೂ ಒಂದೇ ಎಂಬ ಸಂದೇಶ ಅಭಿವ್ಯಕ್ತಗೊಂಡಿದೆ.

### ಭಕ್ತಿ ಆಂದೋಲನ

ಕನಕದಾಸರು ನಡೆದ ಭಕ್ತಿ ಆಂದೋಲನದಲ್ಲಿ ಪ್ರಮುಖ ಪಾತ್ರವನ್ನು ವಹಿಸಿದ್ದಾರೆ. ಯಾಕೆಂದರೆ ಅವರಿಗೆ ದೇವರ ಪೂಜೆಯಲ್ಲಿ, ದೇವಸ್ಥಾನಗಳ ನಿಯಮಗಳಲ್ಲಿ ಜಾತಿಗಳನ್ನು ತರುವುದು ಇಷ್ಟವಿರಲಿಲ್ಲ. ಧಾರ್ಮಿಕ ಆಚರಣೆಗಳಲ್ಲಿ ಜಾತಿ ಪದ್ಧತಿಯನ್ನು ಅವರು ತಿರಸ್ಕರಿಸಿದ್ದರು.

ಕನಕದಾಸರು ಕೂಡ ಹರಿದಾಸ, ಪುರಂದರದಾಸರೊಂದಿಗೆ ಅವರು ಸಹ ಹರಿದಾಸ, ಪುರಂದರದಾಸರೊಂದಿಗೆ ಸ್ಥಳೀಯ ಭಾಷೆ ಕನ್ನಡದಲ್ಲಿ ಕೀರ್ತನೆಗಳನ್ನು ಹಾಡುವ ಮತ್ತು ರಚಿಸುವ ಮೂಲಕ ಸಂಪ್ರದಾಯಗಳನ್ನು ತಿರಸ್ಕರಿಸಿದರು, ಆದರೆ ಹೆಚ್ಚಿನ ನಂಬಿಕೆಯ ಹಾಡುಗಳನ್ನು ನಂತರ ಸಂಸ್ಕೃತದಲ್ಲಿ ರಚಿಸಲಾಯಿತು, ಸಾಮಾನ್ಯ ಜನರಿಗೆ ಅದನ್ನು ಅರ್ಥಮಾಡಿಕೊಳ್ಳುವುದು ಕೂಡ ಕಷ್ಟವಾಗಿತ್ತು.

ಕನಕದಾಸರು ಹರಿದಾಸರ ನಿಕಟವರ್ತಿಯಾದ ದಾಸಕೂಟದ ಪ್ರಮುಖ ಸದಸ್ಯರಾಗಿದ್ದರು. ಅದೇ ಸಮಯದಲ್ಲಿ ವಿಭಿನ್ನ ಧಾರ್ಮಿಕ ಸಂಘಟನೆಯನ್ನು ಮುನ್ನಡೆಸುತ್ತಿದ್ದರು ವ್ಯಾಸಕೂಟವು ಸಂಸ್ಕೃತದಲ್ಲಿ ಚರ್ಚೆಗಳನ್ನು ನಡೆಸುವ ಮೇಲ್ವರ್ಗದ ಪಂಡಿತರನ್ನು ಒಳಗೊಂಡಿದ್ದರೆ, ದಾಸಕೂಟವು ಪವಿತ್ರ ಗ್ರಂಥಗಳ ಶುಷ್ಕ ಪಾಂಡಿತ್ಯವನ್ನು ಮುರಿದು ಸ್ಥಳೀಯ ಭಾಷೆಯಲ್ಲಿ ಹಾಡುವ ದಾಸರನ್ನು ಒಳಗೊಂಡಿತ್ತು. ಆ ಮೂಲಕ ಜನಸಾಮಾನ್ಯರೊಂದಿಗೆ ಅವರು ತುಂಬಾನೇ ಹತ್ತಿರವಾಗಲು ಪ್ರಾರಂಭಿಸಿದರು.

ಸಮಾಜ ಸುಧಾರಣೆಯ ಮನೋಧರ್ಮ ಅವರಲ್ಲಿ ಹಾಸುಹೊಕ್ಕಾಗಿತ್ತು. ಅಂಧಶ್ರದ್ಧೆಯನ್ನು ಅವರು ಒಪ್ಪುವವರಲ್ಲ. ಅವರದ್ದು ಶುದ್ಧ ವೈದಿಕ ಉಪಾಸನೆಯ ಹಾದಿ. ಕಾಯಕದೆಡೆಯೂ ಗಮನ ನೀಡಿರಿ ಎಂಬ ಸಂದೇಶ. ಕೆಟ್ಟ ನಡತೆ ಮತ್ತು ಕೆಟ್ಟ ಚಾರಿತ್ರ್ಯದ ಖಂಡನೆ, ನಿರ್ಮಲ–ಗಾಢ ಭಕ್ತಿ. ಈ ಎಲ್ಲ ಗುಣ ವಿಶೇಷಣಗಳಿಂದಾಗಿ ಕನಕರು ಅದ್ವಿತೀಯರಾದರು.

ಕನಕದಾಸರು ನಮ್ಮಿಂದ ಮರೆಯಾದರೂ ಅವರ ಕೀರ್ತನೆಗಳು, ಹಾಡುಗಳು ನಮ್ಮೊಂದಿಗೆ ಇಂದಿಗೂ ಇದೆ. ಕನಕದಾಸರು ಶ್ರೀಕೃಷ್ಣನ ಪರಮ ಭಕ್ತರಾಗಿದ್ದರಿಂದ ಅವರು ಹೆಚ್ಚಿನ ಹಾಡುಗಳನ್ನು ಶ್ರೀಕೃಷ್ಣನ ಬಗ್ಗೆಯೇ ಹಾಡಿದ್ದಾರೆ.

ಒಂದೇ ಜಾತಿ, ಒಂದೇ ಧರ್ಮ, ಒಂದೇ ಕುಲ ಎಂದು ಸಾರಿದ ದಾಸ ಶ್ರೇಷ್ಠ ಕನಕದಾಸರ ತತ್ವಗಳ ಇಂದಿಗೂ ಪ್ರಸ್ತುತ್ತವಾಗಿವಾಗಿವೆ. ಅವರ ವಿಚಾರ ಧಾರೆಗಳನ್ನು ಜೀವನದಲ್ಲಿ ಪ್ರತಿಯೊಬ್ಬರು ಅಳವಡಿಸಿಕೊಂಡರೆ, ಕುಲ, ಧರ್ಮ, ಮೇಲು, ಕೀಳು, ಉಚ್ಚ, ನೀಚ, ಸ್ಪರ್ಶ, ಅಸ್ಪರ್ಶ್ಯ ಎಂದು ಪ್ರತಿದಿನ ಹೊಡೆದಾಡುವುದು ಹಾಗೂ ಈ ಸಂಬಂಧ ಸಮಾಜದಲ್ಲಿ ಬೇರು ಬಿಟ್ಟ ವೈಷಮ್ಯಗಳು ತನ್ನಿಂದ ತಾನೆ ಮಾಯವಾಗಿ, ಸರ್ವ ಸಮಾನತೆಯ ಆದರ್ಶ ಸಮಾಜ ನಿರ್ಮಾಣ ಮಾಡಲು ಸಾಧ್ಯವಾಗುತ್ತದೆ.

▸▸ **ಮಂಜುನಾಥ್ ನಾಯ್ಕ್**, ಬೆಂಗಳೂರು



# ದಸರಾ ಮಹೋತ್ಸವ : ಸಾಂಸ್ಕೃತಿಕ ಸೊಬಗು ಅನಾವರಣ

**ಮೈಸೂರು** : ವಿಶ್ವವಿಖ್ಯಾತ ಮೈಸೂರು ದಸರಾ ಮಹೋತ್ಸವದ ಪ್ರಮುಖ ಆಕರ್ಷಣೆಯಾದ "ಜಂಬೂಸವಾರಿ"ಯು ಹೂ ಮಳೆಯ ನಡುವೆಯು ಅತ್ಯಂತ ಶಿಸ್ತುಬದ್ಧ ಹಾಗೂ ಅದ್ಧೂರಿಯಾಗಿ ನಡೆದು ಲಕ್ಷಾಂತರ ಮಂದಿಯ ಮನಸೂರೆಗೊಂಡಿತು.

ಈ ಬಾರಿ ಹೆಚ್ಚು ಬಿಸಿಲಿಲ್ಲದ ಆಹ್ಲಾದಕರ ವಾತಾವರಣದಲ್ಲಿ ಜಂಬೂಸವಾರಿ ಆರಂಭ ವಾಯಿತಾದರೂ ನಂತರ ಮೂರು ಬಾರಿ ಹೂ ಮಳೆ. ಒಮ್ಮೆ ಸ್ವಲ್ಪ ಜೋರು ಹನಿಗಳು ಬಿದ್ದವು. ಕಳೆದ ಕೆಲವು ವರ್ಷಗಳಿಗೆ ಹೋಲಿಸಿದರೆ ಈ ಬಾರಿ ಮೆರವಣಿಗೆಯು ಅತ್ಯಂತ ಶಿಸ್ತುಬದ್ಧವಾಗಿ ನಡೆಯಿತು.

ಅರಮನೆಯ ಉತ್ತರದಲ್ಲಿರುವ 'ಬಲರಾಮ' ದ್ವಾರದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಮಧ್ಯಾಹ್ನ 1 ರಿಂದ 1.18 ರವರೆಗೆ ಸಲ್ಲುವ ಶುಭ ಧನುರ್ ಲಗ್ನದಲ್ಲಿ ನಂದಿ ಧ್ವಜ ಪೂಜೆ ನೆರವೇರಿಸಿದರು. ಸತತ ಆರನೇ ಬಾರಿಗೆ 750 ಕೆ.ಜಿ. ತೂಕದ ಚಿನ್ನದ ಅಂಬಾರಿಯನ್ನು ಗಜರಾಜ 'ಅಭಿಮನ್ಯು' ಹೊತ್ತು ಸಂಗಾತಿಗಳಾದ 'ಕಾವೇರಿ' ಹಾಗೂ 'ರೂಪಾ' ಜೊತೆ ಗಾಂಭಿರ್ಯದಿಂದ ಹೆಜ್ಜೆ ಹಾಕುತ್ತಾ ಅರಮನೆ ಆವರಣದ ವಿಶೇಷ ವೇದಿಕೆ ಎದುರು ಬಂದವು. ಸಂಜೆ 4.44ರಲ್ಲಿ ಸಲ್ಲುವ ಶುಭ ಕುಂಭ ಲಗ್ನದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಪುಷ್ಪಾರ್ಚನೆ ನೆರವೇರಿಸಿದರು.

ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಜಿಲ್ಲಾ ಉಸ್ತುವಾರಿ ಸಚಿವ ಡಾ. ಎಚ್.ಸಿ. ಮಹಾದೇವಪ್ಪ ಸೇರಿದಂತೆ ಸಚಿವರು, ಜಿಲ್ಲೆಯ ಶಾಸಕರುಗಳು ಉಪಸ್ಥಿತರಿದ್ದರು.

ಅಂಬಾರಿಯಲ್ಲಿ ಆಸೀನರಾಗಿದ್ದ ಚಾಮುಂಡೇಶ್ವರಿ ದೇವಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಸಂಸದ ಯದುವೀರ್ ಒಡೆಯರ್ ಸೇರಿದಂತೆ ಪ್ರಮುಖರು ಪುಷ್ಪ ನಮನ ಸಲ್ಲಿಸಿ ಗೌರವ ಸೂಚಿಸಿದರು. ಪುಷ್ಪಾರ್ಚನೆ ಆಗುತ್ತಿದ್ದಂತೆಯೇ 21 ಸುತ್ತು ಕುಶಾಲತೋಪುಗಳನ್ನು ಸಿಡಿಸಿ, ರಾಷ್ಟ್ರಗೀತೆ ನುಡಿಸಲಾಯಿತು. ನಂತರ ಅಂಬಾರಿ ಆನೆಯು ಪೊಲೀಸ್ ಅಶ್ವದಳದ ಬೆಂಗಾವಲಿನಲ್ಲಿ ಸಾಗಿ, ರಾಜರ ಕಾಲದ ಗತವೈಭವವನ್ನು ನೆನಪಿಸಿತು.



ಮೆರವಣಿಗೆಯು ಅರಮನೆಯಿಂದ ಸಂಪೂರ್ಣವಾಗಿ ಹೊರಗೆ ಹೋಗಲು ಸುಮಾರು ಎರಡು ತಾಸು ಬೇಕಾಯಿತು. ಚಾಮರಾಜ ವೃತ್ತ, ಕೃಷ್ಣರಾಜ ವೃತ್ತ, ಸಯ್ಯಾಜಿರಾವ್ ರಸ್ತೆ, ಆಯುರ್ವೇದ ಕಾಲೇಜು ವೃತ್ತ, ನ್ಯೂ ಸಯ್ಯಾಜಿರಾವ್ ರಸ್ತೆ, ಹೈವೆ ವೃತ್ತದ ಮೂಲಕ ಐದು ಕಿ.ಮೀ. ದೂರದ ಬನ್ನಿಮಂಟಪ ತಲುಪಿತು. ಅರಮನೆ ಆವರಣದಲ್ಲಿ ಮಾತ್ರವಲ್ಲದೇ ಮೆರವಣಿಗೆ ಸಾಗಿದ ಇಕ್ಕೆಲಗಳಲ್ಲಿ ಲಕ್ಷಾಂತರ ಮಂದಿ ನಿಂತು, ಮೆರವಣಿಗೆಯನ್ನು ಕಣ್ತುಂಬಿಕೊಂಡರು. ಸಂಜೆ ಬನ್ನಿಮಂಟಪದಲ್ಲಿ ಚಿತ್ತಾಕರ್ಷಕ ಪಂಜಿನಕವಾಯತು ನಡೆಯಿತು. ರಾಜ್ಯಪಾಲ ಥಾವರ್ ಚಂದ್ ಗೆಹಲೋತ್ ಗೌರವ ವಂದನೆ ಸ್ವೀಕರಿಸಿದರು. ಇದರೊಂದಿಗೆ ಹನ್ನೊಂದು ದಿನಗಳಿಂದ ನಡೆಯುತ್ತಿದ್ದ ದಸರಾ ಮಹೋತ್ಸವಕ್ಕೆ ತೆರೆ ಬಿದಿತು.



## ಸದಸ್ಯರ ಆರ್ಥಿಕ ಸ್ವಾವಲಂಬಿ ಬದುಕಿಗೆ ಆಸರೆ

# ರಜತ ಮಹೋತ್ಸವ ಸಂಭ್ರಮದಲ್ಲಿ ದಾವಣಗೆರೆ ಸಂಚಿತ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ

**ದಾವಣಗೆರೆ ನಗರ ಹಲವು ಐತಿಹಾಸಿಕ ಹಿನ್ನಲೆ ಹೊಂದಿದ್ದು, ಎಲ್ಲಾ ವಲಯಗಳಲ್ಲಿಯೂ ತನ್ನದೆ ವೈಶಿಷ್ಠತೆಯನ್ನೊಳಗೊಂಡಿದೆ. ಈ ನಗರದ ಸಾರ್ವಜನಿಕರ ಆರ್ಥಿಕ ಹಾಗೂ ಸಾಮಾಜಿಕ ಬದುಕಿಗೆ ಆಸರೆಯಾಗಿ ಕಾರ್ಯನಿರ್ವಹಿಸುತ್ತಿರುವುದು ಸಹಕಾರ ಚಳವಳಿ. ಶ್ರೀಸಾಮಾನ್ಯರು, ಶ್ರೀಮಂತರು ಅನ್ನುವ ಬೇಧಭಾವ ಹೋಗಲಾಡಿಸಿ, ಸಹಕಾರ ಚಳವಳಿ ಸಮಾಜದಲ್ಲಿ ಸಾಮಾಜಿಕ ನ್ಯಾಯವನ್ನು ಒದಗಿಸುವ ಮೂಲಕ ಸಮಾನತೆಯನ್ನು ತರಲು ನೆರವಾಗುತ್ತಿದೆ ಸಹಕಾರ ಕ್ಷೇತ್ರ. ಈ ವಲಯ ಇಂದು ಹಲವಾರು ಸಮುದಾಯಗಳ ಹಾಗೂ ಅಬಲ ವರ್ಗದ ಜನರ ಆರ್ಥಿಕ ಬಲವರ್ಧನೆಗೆ ಪೂರಕವಾಗಿ ಕೆಲಸ ನಿರ್ವಹಿಸುತ್ತಿದೆ. ಲಕ್ಷಾಂತರ ಜನರು ಈ ಕ್ಷೇತ್ರದ ಮೂಲಕ ಜೀವನ ಕಟ್ಟಿಕೊಂಡಿದ್ದಾರೆ. ಇಂತಹ ಕ್ಷೇತ್ರದೊಳಗೆ ಇಂದು ದಾವಣಗೆರೆ ಜಿಲ್ಲೆಯ ಸಂಚಿತ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿಯೂ ಒಂದಾಗಿದ್ದು, ರಜತ ಮಹೋತ್ಸವದ ಸಂಭ್ರಮದಲ್ಲಿದೆ. ಸಂಘವು ಈಗಾಗಲೇ ಸಾವಿರಾರು ಸದಸ್ಯರ ಆರ್ಥಿಕ ಸ್ವಾವಲಂಬಿ ಬದುಕಿಗೆ ಆಸರೆಯಾಗಿದೆ.**

**ಸಂಘದ ಆರಂಭ :** ಸಂಘವು ದಿನಾಂಕ 20-08-2000ರಂದು ಸಂಸ್ಥಾಪಕ ಅಧ್ಯಕ್ಷರಾದ ಟಿ.ಎನ್. ನಾಗರಾಜ್, ಉಪಾಧ್ಯಕ್ಷರಾದ ಪಿ.ಎಂ.ರುದ್ರಯ್ಯ ಮತ್ತು ಇತರೆ ಸಹಕಾರಿಗಳೊಂದಿಗೆ ಕೇವಲ 400 ಜನ ಸದಸ್ಯರಿಂದ ರೂ. 4.00 ಲಕ್ಷ ಷೇರು ಬಂಡವಾಳದೊಂದಿಗೆ ತನ್ನ ಸೇವೆ ಆರಂಭಿಸಿತು. ಸಂಘವು ಪ್ರಸ್ತುತ 2024-2025ನೇ ಸಾಲಿನಲ್ಲಿ 1454 ಸದಸ್ಯರಿಂದ ರೂ. 17.00 ಕೋಟಿಗು ಹೆಚ್ಚು ವ್ಯವಹರಿಸಿದ್ದು, ರೂ. 18.00 ಲಕ್ಷಕ್ಕೂ ಹೆಚ್ಚು ನಿವ್ವಳ ಲಾಭ ಗಳಿಸಿ ಪ್ರಗತಿ ಪಥದಲ್ಲಿ ಸಾಗುತ್ತಿದೆ.

ದಶಕಗಳಿಂದ ಸಹಕಾರ ಚಳವಳಿಯ ಬಗ್ಗೆ ಹೆಚ್ಚಿನ ಆಸಕ್ತಿ ವಹಿಸಿರುವ ಸಹಕಾರಿ ಮುಖಂಡರು, ದಾವಣಗೆರೆ ಜಿಲ್ಲಾ ಸಹಕಾರ ಒಕ್ಕೂಟದ ನಿರ್ದೇಶಕರು ಹಾಗೂ ಸಂಘದ ಅಧ್ಯಕ್ಷರಾದ ಟಿ.ಎಂ ಪಾಲಾಕ್ಷ ರವರ ನೇತೃತ್ವದಲ್ಲಿ ಆಡಳಿತ ಮಂಡಳಿ ಹಾಗೂ ಸಿಬ್ಬಂದಿ ವರ್ಗದವರ ಪ್ರಾಮಾಣಿಕ ಶ್ರಮದಿಂದ ಇಂದು ಈ ಸಂಘ ಇಷ್ಟು ಎತ್ತರಕ್ಕೆ ಬೆಳೆದಿದೆ. ಸಂಘವು ರಾಷ್ಟ್ರೀಕೃತ ಬ್ಯಾಂಕುಗಳು, ಖಾಸಗಿ ಬ್ಯಾಂಕುಗಳು ಮತ್ತು ಪಟ್ಟಣ ಸಹಕಾರ ಬ್ಯಾಂಕುಗಳು ಗ್ರಾಹಕರಿಗೆ ನೀಡುತ್ತಿರುವ



ಟಿ.ಎಂ. ಪಾಲಾಕ್ಷ
ಅಧ್ಯಕ್ಷರು



ಪಿ.ಎಂ. ವೀರಭದ್ರಯ್ಯ
ಉಪಾಧ್ಯಕ್ಷರು



ಜೆ. ವಿಜಯಕುಮಾರ್
ಕಾರ್ಯದರ್ಶಿ

ಹೊಸ ತಂತ್ರಜ್ಞಾನಾಧಾರಿತ ಸೇವೆಗಳನ್ನು ನೀಡುವಲ್ಲಿ ಯಶಸ್ವಿಯಾಗಿದೆ. ತಾನೊಬ್ಬನೆ ಬಾಳಿದರೆ ಸಾಲದು ತನ್ನೊಂದಿಗೆ ಸಮಾಜವು ಬೆಳೆಯಬೇಕೆಂಬ ಸಹಕಾರಿ ರಂಗದ ಮೂಲ ಆಶಯವನ್ನು ಅಳವಡಿಸಿಕೊಂಡು ನಡೆಯುವುದರ ಜೊತೆಗೆ ನಿಸ್ವಾರ್ಥ, ಪ್ರಾಮಾಣಿಕ ಸೇವೆಯಿಂದ ಕೂಡಿದಾಗ ಯಾವುದೇ ಸಂಘ ಸಂಸ್ಥೆಗಳು ಪ್ರಬಲವಾಗಿ ಸರ್ವಾಂಗೀಣ ಸಮೃದ್ಧಿ ಹೊಂದುತ್ತವೆ ಎನ್ನುವುದಕ್ಕೆ ಸಂಚಿತ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿಯೂ ಮಾದರಿಯಾದುದಾಗಿದೆ. ಆರಂಭವಾದ ಕೆಲವೇ ವರ್ಷಗಳಲ್ಲಿ ಸದಸ್ಯರನ್ನು ,ಗ್ರಾಹಕರನ್ನು ಆಕರ್ಷಿಸುವಲ್ಲಿ ಅವರಿಗೆ ಅಗತ್ಯ ಸೌಲಭ್ಯಗಳನ್ನು ಒದಗಿಸುವುದರಲ್ಲಿ ಸಂಘವು ಯಶಸ್ವಿಯಾಗಿದೆ.

**ಸಂಘದ ವಿಶೇಷತೆಗಳು:**

- ಸಂಘವು ಪ್ರಾರಂಭದಿಂದ ಇಲ್ಲಿಯವರೆಗೆ ಚುನಾವಣೆ ಜರುಗಿಸದೇ ಸಹಕಾರ ಮನೋಭಾವನೆಯಿಂದ ಅವಿರೋಧ ಆಯ್ಕೆಯ ಮೂಲಕ ಆಡಳಿತ ಮಂಡಳಿ ರಚನೆಯಾಗುತ್ತಿದೆ.
- ಸಕಾಲದಲ್ಲಿ ಸದಸ್ಯರಿಗೆ ಸಾಲ ವಿತರಣೆ.
- ಸದಸ್ಯರುಗಳಿಗೆ ಕಳುಹಿಸುವ ಎಸ್.ಎಂ.ಎಸ್ ಗಳಿಗೆ ಯಾವುದೇ ಶುಲ್ಕವಿಲ್ಲದೇ ಸೇವೆ ನೀಡಲಾಗುತ್ತಿದೆ.
- ಸದಸ್ಯರ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಪ್ರತಿವರ್ಷ ನೀಡಲಾಗುತ್ತಿದೆ.

## ಸಂಸ್ಥೆ ನಮ್ಮದು ಎಂಬ ಮನೋಭಾವನೆ ಸಂಘದ ಅಭಿವೃದ್ಧಿಗೆ ಪೂರಕ : ಟಿ.ಎಂ. ಪಾಲಾಕ್ಷ

ಸಂಘದ ಅಧ್ಯಕ್ಷರಾದ ಟಿ.ಎಂ ಪಾಲಕ್ಷ ಅವರು ಸಂಘದ ಬಗ್ಗೆ ಮಾತನಾಡುತ್ತಾ, ಸಹಕಾರ ಸಂಘಗಳು ಇಂದು ಜನಸಾಮಾನ್ಯರ ಬದುಕಿಗೆ ಆರ್ಥಿಕ ಸೌಲಭ್ಯಗಳನ್ನು ಒದಗಿಸುವಲ್ಲಿ ಯಶಸ್ವಿಯಾಗಿವೆ. ಇಂತಹ ಸಂಘಗಳ ಬೆಳವಣಿಗೆಯ ರೂವಾರಿಗಳು ಆಡಳಿತ ಮಂಡಳಿ ಹಾಗೂ ಅಧಿಕಾರಿ ವರ್ಗ ಅವರಿಗೆ ಸಂಘ ನಮ್ಮದು ಎಂಬ ಮನೋಭಾವ ಇರಬೇಕು. ಇದು ಸಂಸ್ಥೆಗಳ ಬೆಳವಣಿಗೆಗೆ ಅಡಿಪಾಯವಾಗಲಿದೆ ಎಂದರು. ಹಾಗೆ, ನಮ್ಮ ಸಂಘ ತಂತ್ರಜ್ಞಾನಾಧಾರಿತ ಯುಗದ ಹೆಚ್ಚಿನ ಪೈಪೋಟಿಗಳಿದ್ದರೂ ಯಶಸ್ಸಿನತ್ತ ದಾಪುಗಾಲಿಡುತ್ತಿದೆ. ಇದು ಸಂತಸದ ಸಂಗತಿ ಜತೆಗೆ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ಮತ್ತು ದಾವಣಗೆರೆ ಜಿಲ್ಲಾ ಸಹಕಾರ ಒಕ್ಕೂಟದಿಂದ ಆಯೋಜಿಸುವ ತರಬೇತಿ ಕಾರ್ಯಕ್ರಮಗಳು ಸಹಕಾರ ಸಂಘಗಳ ಕಾರ್ಯಚಟುವಟಿಕೆಗಳಿಗೆ ಉಪಯುಕ್ತವಾಗುತ್ತಿವೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

- ಪ್ರತಿವರ್ಷ ಸಹಕಾರ ಸಪ್ತಾಹ ಆಚರಣೆಗೆ, ಧಾರ್ಮಿಕ, ಸಾಮಾಜಿಕ ಕಾರ್ಯಗಳಿಗೆ, ರಾಷ್ಟ್ರೀಯ ಹಬ್ಬಗಳು ನಾಡ ಹಬ್ಬಗಳಿಗೆ ನೆರವು.
- ಸಂಘದ ಸದಸ್ಯರುಗಳಿಗೆ ಅಪಘಾತ ಸಂಭವಿಸಿ, ಮರಣ ಹೊಂದಿದರೆ ಸಂಘದಿಂದ ರೂ. 1.00 ಲಕ್ಷ ಸಹಾಯಧನ ಪಾವತಿಸಲಾಗುತ್ತಿದೆ. ಮತ್ತು ಮೃತ ಷೇರುದಾರರ ಕುಟುಂಬದ ವಾರಸುದಾರರಿಗೆ ರೂ. 10,000/– ಮರಣೋತ್ತರ ನಿಧಿ ನೀಡಲಾಗುತ್ತಿದೆ.
- ಹಿರಿಯ ನಾಗರೀಕರಿಗೆ ಠೇವಣಿಯಲ್ಲಿ 0.50% ಹೆಚ್ಚಿಗೆ ಬಡ್ಡಿಯನ್ನು ನೀಡಲಾಗುತ್ತಿದೆ.
- ಲಾಕರ್ ಸೌಲಭ್ಯ ಒದಗಿಸಲಾಗುತ್ತಿದೆ.
- ಕಂತಿನ ಸಾಲ, ವಾಹನ ಸಾಲ, ಆಸ್ತಿ ಆದಾರದ ಸಾಲ, ನಗದುದ್ದುರಿ ಸಾಲ, ಭದ್ರತಾ ನಗದುದ್ದುರಿ, ಗೃಹ ನಿರ್ಮಾಣ ಸಾಲ, ಬಂಗಾರ ಆಭರಣ ಸಾಲ, ಸಂಚಿತ ನಿತ್ಯನಿಧಿ ಠೇವಣಿ ಸಾಲ, ಸಂಚಿತ ಸಾಲ ಮತ್ತು ಇತರೆ ಸಾಲಗಳನ್ನು ಸದಸ್ಯರುಗಳಿಗೆ ಕಲ್ಪಿಸಿದ್ದಾರೆ.

**ಸಂಘದ ಕಳೆದ 3 ವರ್ಷಗಳ ಪ್ರಗತಿ ಪಕ್ಷಿನೋಟ (ರೂ. ಲಕ್ಷಗಳಲ್ಲಿ)**

| ವಿವರ | 2022–23 | 2023–24 | 2024–25 |
|---|---|---|---|
| ಸದಸ್ಯರ ಸಂಖ್ಯೆ | 1400 | 1433 | 1454 |
| ಷೇರು ಬಂಡವಾಳ | 47.42 | 48.17 | 52.04 |
| ಠೇವಣಾತಿಗಳು | 131.20 | 138.37 | 141.74 |
| ಸಾಲಗಳು | 111.90 | 123.12 | 135.39 |
| ಕಾಯ್ದಿಟ್ಟ ನಿಧಿ /ಇತರೆ ನಿಧಿಗಳು | 158.08 | 170.88 | 165.47 |
| ನಿವ್ವಳ ಲಾಭ | 20.41 | 17.73 | 18.88 |
| ದುಡಿಯುವ ಬಂಡವಾಳ | 1546.97 | 1630.48 | 1709.36 |
| ಲಾಭಾಂಶ (ಡಿವೆಂಡೆಂಡ್) | 10% | 10% | 12% |

## ಸಂಘದ ರಜತ ಮಹೋತ್ಸವ ಆಚರಣೆ



ಸೊಸೈಟಿಯೂ ಇತ್ತೀಚೆಗೆ ತನ್ನ ರಜತ ಮಹೋತ್ಸವ ಕಾರ್ಯಕ್ರಮನ್ನು ಆಚರಿಸಿಕೊಂಡಿದ್ದು, ಈ ಸಂದರ್ಭದಲ್ಲಿ ಮುಖ್ಯಅತಿಥಿಗಳಾಗಿ ದಾವಣಗೆರೆ ಹರಿಹರ ಅರ್ಬನ್ ಸಹಕಾರ ಬ್ಯಾಂಕಿನ ಅಧ್ಯಕ್ಷರಾದ ಎನ್.ಎ. ಮುರುಗೇಶ್, ಸಹಕಾರಿಗಳಾದ ದೇವರಮನಿ ಶಿವಕುಮಾರ್ ಮತ್ತಿತರರು ಭಾಗವಹಿಸಿದ್ದರು.

**ಸಂಘದ ಆಡಳಿತ ಮಂಡಳಿ ಸದಸ್ಯರು**

ಅಧ್ಯಕ್ಷರು – ಟಿ.ಎಂ ಪಾಲಾಕ್ಷ,

ಉಪಾಧ್ಯಕ್ಷರು – ಪಿ.ಎಂ. ವೀರಭದ್ರಯ್ಯ,

**ನಿರ್ದೇಶಕರುಗಳು :** ಜಿ.ವೈ. ಭೋಜರಾಜ್, ಎನ್.ಹೆಚ್. ಪ್ರಕಾಶಚಾರಿ, ಎಸ್.ವಿ. ರುದ್ರಮುನಿ, ಜೆ. ಸಂಜಯ್‌ಕುಮಾರ್, ವಿ.ಹೆಚ್. ಕುಮಾರ್, ಪಿ. ಹೇಮಲತಾ, ಎನ್.ಎಂ. ರಾಜಶ್ರೀ, ಡಾ. ಶಿವಕುಮಾರ್ ಪಿ.ಎಂ, ಕೊಟ್ರೇಶ್ ಪಿ.ಎಸ್, ನರಸಿಂಹಮೂರ್ತಿ. ಸಿ.

**ಸಿಬ್ಬಂದಿಗಳು :** ಕಾರ್ಯದರ್ಶಿ – ಜೆ. ವಿಜಯಕುಮಾರ್, ಲೆಕ್ಕಿಗರು – ಚಂದ್ರಕಲಾ ಜಿ.ಹೆಚ್, ನಗದು ಗುಮಸ್ತರು – ಟಿ.ಎಂ ವಿನಯ್, ಸಾಲ ವಸೂಲಿ ಗುಮಾಸ್ತರು – ಹೆಚ್.ಜಿ ವಿಜಯಕುಮಾರ್.